**C1**

ದಿನಾಂಕ : 26-10-2024 ಶನಿವಾರ
ಒಟ್ಟು ಪ್ರಶ್ನೆಗಳು : 100 ಗರಿಷ್ಠ ಅಂಕಗಳು : 150
ಒಟ್ಟು ಅವಧಿ : 150 ನಿಮಿಷಗಳು
ಉತ್ತರಿಸಲು ಇರುವ ಗರಿಷ್ಠ ಅವಧಿ : 120 ನಿಮಿಷಗಳು
ಸಮಯ : ಮಧ್ಯಾಹ್ನ 2.30 ರಿಂದ 4.30 ರ ವರೆಗೆ

ಕ್ರಮ ಸಂಖ್ಯೆ :

ಯು 2VAGT2610KAN24

ಂಕಗಳು

**ಮಾಡಿ:**

1. ಕೊಠಡಿ ಮೇಲ್ವಿಚಾರಕರಿಂದ ಈ ಪ್ರಶ್ನೆಪತ್ರಿಕೆಯನ್ನು ನಿಮಗೆ ಎರಡನೆಯ ಬೆಲ್ ಮ. 2.25 ಆದ ನಂತರ ಕೊಡಲಾಗುತ್ತದೆ.
2. ಅಭ್ಯರ್ಥಿಗಳು ನೋಂದಣಿ ಸಂಖ್ಯೆಯನ್ನು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಬರೆದು ಅದಕ್ಕೆ ಸಂಬಂಧಿಸಿದ ವೃತ್ತಗಳನ್ನು ಸಂಪೂರ್ಣವಾಗಿ ತುಂಬಿದ್ದೀರೆಂದು ಖಾತ್ರಿಪಡಿಸಿಕೊಳ್ಳಿ.
3. ಪ್ರಶ್ನೆಪತ್ರಿಕೆಯ ವರ್ಷನ್ ಕೋಡ್ ಮತ್ತು ಕ್ರಮಸಂಖ್ಯೆಯನ್ನು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಬರೆದು ಅದಕ್ಕೆ ಸಂಬಂಧಿಸಿದ ವೃತ್ತಗಳನ್ನು ಸಂಪೂರ್ಣವಾಗಿ ತುಂಬಬೇಕು.
4. ಪ್ರಶ್ನೆಪತ್ರಿಕೆಯ ವರ್ಷನ್ ಕೋಡ್ ಮತ್ತು ಕ್ರಮಸಂಖ್ಯೆಯನ್ನು ನಾಮಿನಲ್ ರೋಲ್‌ನಲ್ಲಿ ತಪ್ಪಿಲ್ಲದೆ ಬರೆಯಬೇಕು.
5. ಓ.ಎಂ.ಆರ್. ಉತ್ತರ ಪತ್ರಿಕೆಯ ಕೆಳಭಾಗದ ನಿಗದಿತ ಜಾಗದಲ್ಲಿ ಪೂರ್ಣ ಸಹಿ ಮಾಡಬೇಕು.

**ಮಾಡಬೇಡಿ:**

1. **ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಮುದ್ರಿತವಾಗಿರುವ ಟೈಮಿಂಗ್ ಮಾರ್ಕನ್ನು ತಿದ್ದಬಾರದು / ಹಾಳುಮಾಡಬಾರದು / ಅಳಿಸಬಾರದು.**
2. **ಮೂರನೇ ಬೆಲ್ ಮ. 2.30 ಕ್ಕೆ ಆಗುತ್ತದೆ. ಅಲ್ಲಿಯವರೆಗೂ,**
   - ಪ್ರಶ್ನೆಪತ್ರಿಕೆಯ ಬಲಭಾಗದಲ್ಲಿರುವ ಸೀಲ್ ಅನ್ನು ತೆಗೆಯಬಾರದು.
   - ಪ್ರಶ್ನೆಪತ್ರಿಕೆಯ ಒಳಗಡೆ ಇರುವ ಪ್ರಶ್ನೆಗಳನ್ನು ನೋಡಲು ಪ್ರಯತ್ನಿಸಬಾರದು ಮತ್ತು ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಉತ್ತರಿಸಲು ಪ್ರಾರಂಭಿಸಬಾರದು.

## ಅಭ್ಯರ್ಥಿಗಳಿಗೆ ಮುಖ್ಯ ಸೂಚನೆಗಳು

1. **ಪ್ರಶ್ನೆಗಳಲ್ಲಿ ಬಳಸಿರುವ signs and symbols (ಚಿಹ್ನೆ ಮತ್ತು ಸಂಕೇತ) ಗಳನ್ನು, ಬೇರೆ ರೀತಿಯಲ್ಲಿ ಹೇಳದ ಹೊರತು, ನಿಗದಿತ ಪಠ್ಯಪುಸ್ತಕದಲ್ಲಿನ ಅರ್ಥವನ್ನು ಪರಿಗಣಿಸಬೇಕು.**
2. ಪ್ರಶ್ನೆಪತ್ರಿಕೆಯಲ್ಲಿ ಒಟ್ಟು 100 ಪ್ರಶ್ನೆಗಳಿದ್ದು, ಪ್ರತಿ ಪ್ರಶ್ನೆಗೂ 4 ಬಹು ಆಯ್ಕೆ ಉತ್ತರಗಳು ಇರುತ್ತವೆ. ಪ್ರತಿ ಪ್ರಶ್ನೆಯ ಕೆಳಗೆ ಕೊಟ್ಟಿರುವ ನಾಲ್ಕು ಬಹು ಆಯ್ಕೆಯ ಉತ್ತರಗಳಲ್ಲಿ ಸರಿಯಾದ ಒಂದು ಉತ್ತರವನ್ನು ಆಯ್ಕೆ ಮಾಡಿ.
3. **ಮೂರನೇ ಬೆಲ್ ಅಂದರೆ ಮ. 2.30** ರ ನಂತರ ಪ್ರಶ್ನೆಪತ್ರಿಕೆಯ ಬಲಭಾಗದಲ್ಲಿರುವ ಸೀಲ್ ತೆಗೆದು ಈ ಪ್ರಶ್ನೆಪತ್ರಿಕೆಯಲ್ಲಿ ಯಾವುದೇ ಪುಟಗಳು ಮುದ್ರಿತವಾಗಿಲ್ಲದೇ ಇರುವುದು ಕಂಡು ಬಂದಲ್ಲಿ ಅಥವಾ ಹರಿದು ಹೋಗಿದ್ದಲ್ಲಿ ಅಥವಾ ಯಾವುದೇ ಐಟಂಗಳು ಬಿಟ್ಟುಹೋಗಿದ್ದಲ್ಲಿ ಪ್ರಶ್ನೆಪತ್ರಿಕೆಯನ್ನು ಬದಲಾಯಿಸಿಕೊಳ್ಳುವುದು ನಂತರ ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಉತ್ತರಿಸಲು ಪ್ರಾರಂಭಿಸುವುದು.
4. ಪ್ರಶ್ನೆಪತ್ರಿಕೆಯಲ್ಲಿನ ಪ್ರಶ್ನೆ ಸಂಖ್ಯೆಗೆ ಅನುಗುಣವಾಗಿರುವ ಸರಿ ಉತ್ತರವನ್ನು **ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಅದೇ ಕ್ರಮ ಸಂಖ್ಯೆಯ ಮುಂದೆ ನೀಡಿರುವ ಸಂಬಂಧಿಸಿದ ವೃತ್ತವನ್ನು ನೀಲಿ ಅಥವಾ ಕಪ್ಪು ಶಾಯಿಯ ಬಾಲ್ ಪಾಯಿಂಟ್ ಪೆನ್‌ನಿಂದ ಸಂಪೂರ್ಣ ತುಂಬುವುದು.**

| ಸರಿಯಾದ ಕ್ರಮ CORRECT METHOD | ತಪ್ಪು ಕ್ರಮಗಳು WRONG METHODS | | |
|---|---|---|---|
| | ⊗ ② ③ ④ | ① ② ③ ④ | ① ● ● ④ |
| ① ● ③ ④ | ◐ ② ③ ④ | ① ◉ ③ ④ | ① ② ③ ④ |

5. ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ಸ್ಕ್ಯಾನ್ ಮಾಡುವ ಸ್ಕ್ಯಾನರ್ ಬಹಳ ಸೂಕ್ಷ್ಮವಾಗಿದ್ದು ಸಣ್ಣ ಗುರುತನ್ನು ಸಹ ದಾಖಲಿಸುತ್ತದೆ. ಆದ್ದರಿಂದ ಓ.ಎಂ.ಆರ್. ಉತ್ತರ ಪತ್ರಿಕೆಯಲ್ಲಿ ಉತ್ತರಿಸುವಾಗ ಎಚ್ಚರಿಕೆ ವಹಿಸಿ.
6. ಪ್ರಶ್ನೆಪತ್ರಿಕೆಯಲ್ಲಿ ಕೊಟ್ಟಿರುವ ಖಾಲಿ ಜಾಗವನ್ನು ರಫ್ ಕೆಲಸಕ್ಕೆ ಉಪಯೋಗಿಸಿ. ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ಇದಕ್ಕೆ ಉಪಯೋಗಿಸಬೇಡಿ.
7. ಕೊನೆಯ ಬೆಲ್ ಅಂದರೆ ಸಂಜೆ 4.30 ಆದ ನಂತರ ಉತ್ತರಿಸುವುದನ್ನು ನಿಲ್ಲಿಸಿ. ಓ.ಎಂ.ಆರ್. ಉತ್ತರ ಪತ್ರಿಕೆಯನ್ನು ಕೊಠಡಿ ಮೇಲ್ವಿಚಾರಕರಿಗೆ ಹಿಂದಿರುಗಿಸಿ.
8. ಕೊಠಡಿ ಮೇಲ್ವಿಚಾರಕರು OMRನ ಮೇಲ್ಭಾಗದ ಹಾಳೆಯನ್ನು ಪ್ರತ್ಯೇಕಿಸಿ (ಕಚೇರಿ ಪ್ರತಿ) ತಮ್ಮ ವಶದಲ್ಲಿಟ್ಟುಕೊಂಡು ಹಿಂಬದಿಯ ಯಥಾಪ್ರತಿಯನ್ನು (ಅಭ್ಯರ್ಥಿಯ ಪ್ರತಿ) ಅಭ್ಯರ್ಥಿಗಳಿಗೆ ಕೊಡುತ್ತಾರೆ.

8058

5 ಲಕ್ಷದಷ್ಟು ಸ್ಪರ್ಧಾರ್ಥಿಗಳು Join ಆಗಿರುವ SR WORLD ಟೆಲಿಗ್ರಾಂ ಗ್ರೂಪ್ ಗೆ
ನೀವೂ ಸೇರಿ, ಗ್ರೂಪ್ ಲಿಂಕ್: https://t.me/SRWORLDShankarBellubbiSir

www.shikarat.com

CamScanner

1. ಶಿವರಾಮ ಕಾರಂತರಿಗೆ ಸಂಬಂಧಿಸಿದಂತೆ ಈ ಮುಂದಿನ ಯಾವ ಹೇಳಿಕೆ/ಹೇಳಿಕೆಗಳು ತಪ್ಪಾಗಿದೆ/ತಪ್ಪಾಗಿವೆ?

ಹೇಳಿಕೆ 1 : ಚೋಮನದುಡಿ, ಗರ್ಭಗುಡಿ, ಅಳಿದ ಮೇಲೆ, ಬೆಟ್ಟದ ಜೀವ ಇವರ ಕಾದಂಬರಿಗಳು

ಹೇಳಿಕೆ 2 : ಹುಚ್ಚು ಮನಸ್ಸಿನ ಹತ್ತು ಮುಖಗಳು ಇವರ ಆತ್ಮಕಥೆ

ಹೇಳಿಕೆ 3 : ಬಾಲ ಪ್ರಪಂಚ – ಇದು ಮಕ್ಕಳಿಗಾಗಿ ಬರೆದ ವಿಶ್ವಕೋಶ

(1) ಹೇಳಿಕೆ 1 ತಪ್ಪು
(2) ಹೇಳಿಕೆ 2 ತಪ್ಪು
(3) ಹೇಳಿಕೆ 3 ತಪ್ಪು
(4) ಹೇಳಿಕೆ 1 ಮತ್ತು ಹೇಳಿಕೆ 2 ತಪ್ಪು

2. 'ಸರಸ್ವತಿಯ ಭಂಡಾರದ ಮುದ್ರೆಯೊನ್ನೊಡೆದೆ' ನೆಂದು ಹೇಳಿಕೊಂಡ ಕವಿ ಯಾರು?

(1) ಪಂಪ
(2) ರನ್ನ
(3) ಪೊನ್ನ
(4) ಜನ್ನ

3. 'ಮಮಿಂಕೆಯದದೊಳ್' – ಇದನ್ನು ಸೂಚಿಸುತ್ತದೆ.

(1) ವಚನಗಳು
(2) ವಿಭಕ್ತಿ ಪ್ರತ್ಯಯಗಳು
(3) ಕೃತ್ ಪ್ರತ್ಯಯಗಳು
(4) ತದ್ಧಿತ ಪ್ರತ್ಯಯಗಳು

4. ''ನೀ ಮಾಯೆಯೊಳಗೊ ನಿನ್ನೊಳು ಮಾಯೆಯೊ'' – ಈ ಕೀರ್ತನೆಯ ರಚನೆಕಾರರು ಯಾರು?

(1) ಕನಕದಾಸ
(2) ವ್ಯಾಸರಾಯ
(3) ಪುರಂದರದಾಸ
(4) ಶ್ರೀಪಾದರಾಜ

5. 'ಅ' ಪಟ್ಟಿಯಲ್ಲಿರುವ ಕೃತಿಗಳನ್ನು 'ಬ' ಪಟ್ಟಿಯಲ್ಲಿನ ಸಾಹಿತ್ಯ ಪ್ರಕಾರಗಳೊಂದಿಗೆ ಹೊಂದಿಸಿ ಬರೆಯಿರಿ.

| ಅ | | ಬ | |
|---|---|---|---|
| (a) | ಹದಿಬದೆಯ ಧರ್ಮ | (i) | ಗದ್ಯ |
| (b) | ಮಿತ್ರವಿಂದಾ ಗೋವಿಂದ | (ii) | ಕಾವ್ಯ |
| (c) | ರಾಮಾಶ್ವಮೇಧ | (iii) | ಚಂಪೂ |
| (d) | ರಾಜಶೇಖರ ವಿಳಾಸ | (iv) | ನಾಟಕ |
| | | (v) | ಸಾಂಗತ್ಯ |

(1) a - ii, b - iv, c - iii, d - i
(2) a - v, b - i, c - iv, d - ii
(3) a - iv, b - iii, c - i, d - ii
(4) a - v, b - iv, c - i, d - iii

---

ಕಚ್ಚಾ ಕಾರ್ಯಕ್ಕಾಗಿ ಸ್ಥಳ



www.shikarat.com
CamScanner

6. 'ತನ', 'ಇಕೆ', 'ಪು', 'ಮೆ' ಇವುಗಳನ್ನು ವ್ಯಾಕರಣದಲ್ಲಿ ಏನೆಂದು ಕರೆಯಲಾಗುತ್ತದೆ?

(1) ತದ್ಧಿತಾಂತ ಭಾವನಾಮಗಳು

(2) ತದ್ಧಿತ ಪ್ರತ್ಯಯಗಳು

(3) ಕೃತ್ ಪ್ರತ್ಯಯಗಳು

(4) ಕೃದಂತ ಭಾವನಾಮಗಳು

7. ಈ ಮುಂದಿನ ಪದಗಳಲ್ಲಿ ಶುದ್ಧರೂಪವನ್ನು ಗುರುತಿಸಿರಿ.

(1) ಮಹಿದರ (2) ಮಹೀದರ

(3) ಮಹಿಧರ (4) ಮಹೀಧರ

8. ಈ ಕೆಳಗಿನವುಗಳಲ್ಲಿ ಗುಂಪಿಗೆ ಸೇರದ ಸಂಯೋಜನೆಯನ್ನು ಗುರುತಿಸಿರಿ.

(1) ಮನೆ, ಹೊಲ, ಹಿತ್ತಿಲು, ಮರ

(2) ಗಿಡ, ನೆಲ, ಆಳು, ತೆಂಕಣ

(3) ಕಮ್ಮಗೆ, ಬಿಳಿದು, ರಾಗಿ, ಬೆಲ್ಲ

(4) ಅರ್ಜಿ, ರೈತ, ಕಾಗದ, ಬಂದೂಕ

9. ''ಕೈಕೇಯಿ ದಶರಥನ <u>ಮೂರನೆಯ</u> ಹೆಂಡತಿಯಾಗಿದ್ದಳು'' – ಈ ವಾಕ್ಯದಲ್ಲಿ ಅಡಿಗೆರೆ ಎಳೆದ ಪದದ ವ್ಯಾಕರಣಾಂಶ ಯಾವುದು?

(1) ಸಂಖ್ಯಾವಾಚಕ (2) ಸಂಖ್ಯೇಯವಾಚಕ

(3) ಪರಿಮಾಣವಾಚಕ (4) ಪ್ರಕಾರವಾಚಕ

10. ಮುಂದಿನ ಪದಗಳಲ್ಲಿ ಗುಂಪಿಗೆ ಸೇರದಿರುವುದನ್ನು ಗುರುತಿಸಿರಿ.

ಮಹತ್ವಾಕಾಂಕ್ಷೆ, ಮಹತ್ತರ, ಮಹಾತ್ಮ, ಮಹಾದ್ವಾರ.

(1) ಮಹತ್ವಾಕಾಂಕ್ಷೆ (2) ಮಹತ್ತರ

(3) ಮಹಾತ್ಮ (4) ಮಹಾದ್ವಾರ

11. ''ಶಂಕರನಿಗೆ ವಿದ್ಯಾರ್ಥಿವೇತನ ಸಿಕ್ಕಿತೆಂಬುದನ್ನು ಅವನಿಂದಲೇ ಕೇಳಿದೆನು''– ಇಲ್ಲಿ ಅಧ್ಯಾಹಾರ ಮಾಡಿಕೊಂಡಾಗ ಕರ್ತೃ ಯಾರಾಗುತ್ತಾರೆ?

(1) ನಾನು (2) ನೀನು

(3) ನಾವು (4) ನೀವು

---

ಕಚ್ಚಾ ಕಾರ್ಯಕ್ಕಾಗಿ ಸ್ಥಳ



www.shikarat.com
CamScanner

12. 'ಅ' ಪಟ್ಟಿಯನ್ನು 'ಬ' ಪಟ್ಟಿಯೊಂದಿಗೆ ಹೊಂದಿಸಿ ಬರೆಯಿರಿ.

| ಅ | ಬ |
|---|---|
| (a) ತಾಲ್ಪಕ್ಷರ | (i) ತುಟಿಯ ಸಹಾಯ |
| (b) ಮೂರ್ಧನ್ಯ | (ii) ಕಂಠದ ಸಹಾಯ |
| (c) ಓಷ್ಠ್ಯ | (iii) ದವಡೆಯ ಸಹಾಯ |
| (d) ಕಂಠ್ಯ | (iv) ಹಲ್ಲುಗಳ ಸಹಾಯ |
| | (v) ನಾಲಗೆಯ ಮೇಲ್ಭಾಗದ ಸಹಾಯ |

(1) a - i, b - iv, c - iii, d - ii
(2) a - iv, b - v, c - iii, d - ii
(3) a - iv, b - iii, c - v, d - ii
(4) a - iii, b - v, c - i, d - ii

13. ಗುಂಪಿಗೆ ಸೇರದ ಪದವನ್ನು ಗುರುತಿಸಿರಿ.

ನಾನು-ನಾವು, ನೀನು-ನೀವು, ತಾನು-ತಾವು, ಅವನು-ಅವರು

(1) ನಾನು-ನಾವು
(2) ತಾನು-ತಾವು
(3) ನೀನು-ನೀವು
(4) ಅವನು-ಅವರು

14. "ಎಲ್ಲರೂ ಪಲ್ಲಕ್ಕಿ ಏರಿದರೆ ಹೊರುವವರು ಯಾರು?" – ಇದರ ವಿಶೇಷಾರ್ಥವನ್ನು ಗುರುತಿಸಿರಿ.

(1) ಪಲ್ಲಕ್ಕಿ ಹತ್ತುವ ಅಧಿಕಾರ ಕೆಲವರಿಗೆ ಮಾತ್ರ.
(2) ಎಲ್ಲರೂ ಹತ್ತಿದರೆ ಅದು ಮುರಿದು ಬೀಳಬಹುದು.
(3) ಎಲ್ಲರೂ ಹಿರಿತನ ಮಾಡಿದರೆ ದುಡಿಯುವವರು ಬೇಕಲ್ಲ
(4) ಪಲ್ಲಕ್ಕಿ ಏರಿದವರಿಗೆಲ್ಲಾ ಮೋಕ್ಷ ಪ್ರಾಪ್ತಿಯಾಗುತ್ತದೆ.

15. "ಪುರುಷಾರ್ಥಗಳ ಸಾದನೆಗೆ ಸ್ವದರ್ಮಾಚರಣೆ ಅತ್ಯಾವಶ್ಯಕ" – ಈ ವಾಕ್ಯದ ಸರಿಯಾದ ರೂಪವನ್ನು ಗುರುತಿಸಿರಿ.

(1) ಪುರುಷಾರ್ಥಗಳ ಸಾದನೆಗೆ ಸ್ವದರ್ಮಾಚಾರಣೆ ಅತ್ಯವಶ್ಯಕ
(2) ಪುರುಷಾರ್ಥಗಳ ಸಾದನೆಗೇ ಸ್ವದರ್ಮಾಚರಣೆ ಅತ್ಯಾವಶ್ಯಕ
(3) ಪುರುಷಾರ್ಥಗಳ ಸಾಧನೆಗೆ ಸ್ವಧರ್ಮಾಚರಣೆ ಅತ್ಯವಶ್ಯಕ
(4) ಪುರುಷಾರ್ಥಗಳ ಸಾಧನೆಗೆ ಸ್ವಧರ್ಮಾಚರಣೆ ಅತ್ಯಾವಶ್ಯಕ

16. ಮೊದಲೆರಡು ಪದಗಳ ಸಂಬಂಧ ತಿಳಿದು ನಾಲ್ಕನೇ ಪದ ಬರೆಯಿರಿ.

ಬಿ.ಎಂ. ಶ್ರೀಕಂಠಯ್ಯ : ಸಂಭಾವನೆ :: ಡಿ.ಎಸ್. ಕರ್ಕಿ : ______

(1) ನಕ್ಷತ್ರಗಾನ
(2) ಗೀತಗೌರವ
(3) ನಾಲ್ದೆಸೆಯ ನೋಟ
(4) ಕಾವ್ಯಗೌರವ

---

ಕಚ್ಚಾ ಕಾರ್ಯಕ್ಕಾಗಿ ಸ್ಥಳ



C

www.shikarat.com
CS CamScanner

17. ಈ ಮುಂದಿನ ಜೋಡಿಗಳಲ್ಲಿ ತಪ್ಪಾದುದನ್ನು ಗುರುತಿಸಿ.

(1) ಕ್ರಿಯಾರ್ಥಕ ಅವ್ಯಯ – ಸಾಕು

(2) ಭಾವಸೂಚಕ ಅವ್ಯಯ – ಆಹಾ

(3) ಸಂಬಂಧಾರ್ಥಕ ಅವ್ಯಯ – ಅಲ್ಲದೆ

(4) ಸಾಮಾನ್ಯಾರ್ಥಕ ಅವ್ಯಯ – ಅವನೇ

18. 'ಅ' ಪಟ್ಟಿಯಲ್ಲಿರುವ ದ್ವಿರುಕ್ತಿಗಳನ್ನು 'ಬ' ಪಟ್ಟಿಯಲ್ಲಿರುವ ಅವುಗಳ ಬಳಕೆಯ ಅರ್ಥದೊಂದಿಗೆ ಹೊಂದಿಸಿ ಬರೆಯಿರಿ.

| ಅ | ಬ |
|---|---|
| (a) ಕೋಪದಲ್ಲಿ | (i) ಬೇಡ ಬೇಡ ಅವನಿಗೆ ಕೊಡಬೇಡ |
| (b) ಆಶ್ಚರ್ಯದಲ್ಲಿ | (ii) ಹೌದು ಹೌದು ನಾನೇ ಗೆದ್ದೆ |
| (c) ಆಕ್ಷೇಪಾರ್ಥದಲ್ಲಿ | (iii) ಕಳ್ಳಾ ಕಳ್ಳಾ ನಿನ್ನನ್ನು ಸುಮ್ಮನೆ ಬಿಡುವೆನೆ? |
| (d) ಉತ್ಸಾಹದಲ್ಲಿ | (iv) ಮನೆಮನೆಗಳನ್ನು ತಿರುಗಿದನು |
| | (v) ಅಬ್ಬಬ್ಬಾ! ಎಂಥಾ ರಮ್ಯನೋಟ |

(1) a - iii, b - v, c - i, d - ii

(2) a - iv, b - iii, c - v, d - ii

(3) a - iii, b - i, c - v, d - iv

(4) a - v, b - iii, c - i, d - iv

19. 'ಇಸವಾಸ' ಪದದ ಗ್ರಾಂಥಿಕ ರೂಪ ಯಾವುದು?

(1) ವಿಷಪ್ರಾಶ (2) ವಿಷಪ್ರಾಸ

(3) ವಿಶ್ವಾಸ (4) ಇಸ್ವಾಸ

20. Encroachment – ಪದದ ಕನ್ನಡ ಭಾಷಾಂತರ ಯಾವುದು?

(1) ಒತ್ತುವರಿ – ಅತಿಕ್ರಮಣ (2) ಅಕ್ರಮ–ಸಕ್ರಮ

(3) ಪರಭಾರೆ–ಖರ್ದಿ (4) ಖುಲಾಸೆ–ಸರ್ವೆ

21. ಸರಿಯಾಗಿ ಹೊಂದಾಣಿಕೆಯಾಗದ ಜೋಡಿಯನ್ನು ಗುರುತಿಸಿರಿ.

(1) ಸಾಲಸೋಲ – ಹುಳುಹುಪ್ಪಡಿ

(2) ಬಟ್ಟೆಬರೆ – ಮಕ್ಕಳುಮರಿ

(3) ಸೊಪ್ಪುಸದೆ – ಕಾಯಿಕಸರು

(4) ನಡುನಡುವೆ – ದೇವರುಗೀವರು

---

ಕಚ್ಚಾ ಕಾರ್ಯಕ್ಕಾಗಿ ಸ್ಥಳ



www.shikarat.com
CamScanner

22. 'ಆಖ್ಯಾತ' ಎಂದರೆ ———
(1) ಕ್ರಿಯಾಪ್ರಧಾನವಾದುದು
(2) ಭಾವಪ್ರಧಾನವಾದುದು
(3) ನಾಮಪ್ರಧಾನವಾದುದು
(4) ವಿಶೇಷಣ ಪ್ರಧಾನವಾದುದು

164461

23. ''ತನ್ನ ಹಡಗು ಬಂಡೆಗೆ ತಗುಲಿ ಒಡೆಯಿತೆಂದು ಆ ವರ್ತಕನಿಗೆ ತಿಳಿಯಿತು'' – ಇದು ಯಾವ ವಾಕ್ಯ ಪ್ರಕಾರಕ್ಕೆ ಸೇರಿದೆ?
(1) ಪ್ರಧಾನ ವಾಕ್ಯ
(2) ಸಂಯೋಜಿತ ವಾಕ್ಯ
(3) ಮಿಶ್ರ ವಾಕ್ಯ
(4) ಸಾಮಾನ್ಯ ವಾಕ್ಯ

24. ಪುಲ್ಲಿಂಗ, ಸ್ತ್ರೀಲಿಂಗ, ನಪುಂಸಕಲಿಂಗ ಮೂರರಲ್ಲಿಯೂ ಪ್ರಯೋಗವಾಗುವ ಶಬ್ದಗಳನ್ನು ಏನೆಂದು ಕರೆಯುತ್ತಾರೆ?
(1) ವಾಚ್ಯಲಿಂಗ
(2) ಪುನ್ನಪುಂಸಕಲಿಂಗ
(3) ಸ್ತ್ರೀನಪುಂಸಕಲಿಂಗ
(4) ನಿತ್ಯನಪುಂಸಕಲಿಂಗ

25. ಈ ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ :

| | | | |
|---|---|---|---|
| (a) | ಹಿರಿಮೆ | (i) | ಮುರುಟು |
| (b) | ಹೊಮ್ಮು | (ii) | ಚಿಕ್ಕದು |
| (c) | ಜಡ | (iii) | ಕಿರಿಮೆ |
| (d) | ನಾಕ | (iv) | ಚೇತನ |
| | | (v) | ನರಕ |

(1) a - v, b - iv, c - iii, d - i
(2) a - iii, b - i, c - iv, d - v
(3) a - i, b - iii, c - v, d - ii
(4) a - iii, b - v, c - ii, d - i

26. 'ನುಡಿ ಪೂಜೆ' ಕೃತಿಯ ಕರ್ತೃ ಯಾರು?
(1) ಡಾ॥ ಪಾಟೀಲ ಪುಟ್ಟಪ್ಪ
(2) ಡಾ॥ ಸುಧಾ ಮೂರ್ತಿ
(3) ಹಿರೇಮಗಳೂರು ಕಣ್ಣನ್
(4) ಡಾ॥ ಎಂ. ಚಿದಾನಂದಮೂರ್ತಿ

27. ಈ ಮುಂದಿನ ಹೇಳಿಕೆಗಳಲ್ಲಿ ಪ್ರಕೃತಿಭಾವಕ್ಕೆ ಸಂಬಂಧಿಸಿದಂತೆ ತಪ್ಪಾದ ಹೇಳಿಕೆ/ಹೇಳಿಕೆಗಳನ್ನು ಗುರುತಿಸಿರಿ.
ಹೇಳಿಕೆ 1 : ಸ್ವರದ ಮುಂದೆ ಸ್ವರ ಬಂದರೂ ಕೆಲವು ಕಡೆ ಸಂಧಿ ಕಾರ್ಯವಾಗದೇ ಇದ್ದ ಹಾಗೆಯೇ ಇರುವುದು.
ಹೇಳಿಕೆ 2 : ಭಾವಸೂಚಕಾವ್ಯಯಗಳ ಮುಂದೆ ಸ್ವರವು ಪರವಾದಾಗಲೂ ಪ್ರಕೃತಿಭಾವ ಬರುವುದು.
ಹೇಳಿಕೆ 3 : 'ಆ' ಸ್ವರದ ಮುಂದೆ ಅ, ಆ, ಐ, ಔ, ಇ, ಈ – ಸ್ವರಗಳು ಬಂದರೆ ಪ್ರಕೃತಿಭಾವ ಬರುವುದು.
(1) ಹೇಳಿಕೆ 1 ತಪ್ಪು.
(2) ಹೇಳಿಕೆ 2 ತಪ್ಪು
(3) ಹೇಳಿಕೆ 3 ತಪ್ಪು
(4) ಹೇಳಿಕೆ 2 ಮತ್ತು ಹೇಳಿಕೆ 3 ತಪ್ಪು

---

ಕಚ್ಚಾ ಕಾರ್ಯಕ್ಕಾಗಿ ಸ್ಥಳ



www.shikarat.com
CamScanner

28. 'ಶ್ಚುತ್ವ ಸಂಧಿ' ಗೆ ಸಂಬಂಧಿಸಿದಂತೆ ಈ ಮುಂದಿನ ಯಾವ ನಿಯಮ/ನಿಯಮಗಳು ತಪ್ಪಾಗಿದೆ/ವೆ?

ನಿಯಮ 1 : 'ಸ'ಕಾರಕ್ಕೆ 'ಶ'ಕಾರ ಪರವಾಗಿ 'ಸ'ಕಾರಕ್ಕೆ 'ಶ'ಕಾರಾದೇಶ

ನಿಯಮ 2 : 'ಸ'ಕಾರಕ್ಕೆ 'ಚ'ಕಾರ ಪರವಾಗಿ 'ಸ'ಕಾರಕ್ಕೆ 'ಸ'ಕಾರಾದೇಶ

ನಿಯಮ 3 : 'ತ'ಕಾರಕ್ಕೆ 'ಚ'ಕಾರ ಪರವಾಗಿ 'ಚ'ಕಾರಾದೇಶ

ನಿಯಮ 4 : 'ತ'ಕಾರಕ್ಕೆ 'ಚ'ಕಾರ ಪರವಾಗಿ 'ತ'ಕಾರಾದೇಶ

(1) ನಿಯಮ 1 ತಪ್ಪು
(2) ನಿಯಮ 2 ಮತ್ತು ನಿಯಮ 4 ತಪ್ಪು
(3) ನಿಯಮ 3 ತಪ್ಪು
(4) ನಿಯಮ 1 ಮತ್ತು ನಿಯಮ 3 ತಪ್ಪು

29. ಸಂಧಿ ಕಾರ್ಯಕ್ಕೆ ಸಂಬಂಧಿಸಿದಂತೆ ಈ ಮುಂದಿನ ಹೇಳಿಕೆಗಳನ್ನು ಗಮನಿಸಿ ಸರಿಯಾದ ಹೇಳಿಕೆ/ಹೇಳಿಕೆಗಳನ್ನು ಗುರುತಿಸಿರಿ.

ಹೇಳಿಕೆ 1 : ಪೂರ್ವಪದದ ಕೊನೆಯ ಸ್ವರವು ಲೋಪವಾಗುವುದಕ್ಕೆ ಮುಖ್ಯ ಕಾರಣವೆಂದರೆ ಅದು ದುರ್ಬಲವಾಗಿರುವುದು.

ಹೇಳಿಕೆ 2 : ದ್ರಾವಿಡ ಭಾಷೆಯ ಶಬ್ದಾಂತ್ಯದ 'ಉ' ಕಾರವು ಸಾಮಾನ್ಯವಾಗಿ ಮೂಲಪ್ರಕೃತಿಗೆ ಸೇರಿದೆ.

ಹೇಳಿಕೆ 3 : ಶಬ್ದಾಂತ್ಯದ 'ಉ' ಕಾರವು ಉಚ್ಚಾರಣೆಯ ಸೌಕರ್ಯಕ್ಕೋಸ್ಕರ ಬಂದು ಸೇರಿದ್ದು, ಅದು ಲೋಪವಾದರೆ ಶಬ್ದದ ಮೂಲರೂಪಕ್ಕೆ ಹಾನಿಯುಂಟಾಗುತ್ತದೆ.

(1) ಹೇಳಿಕೆ 1 ಮಾತ್ರ ಸರಿ
(2) ಹೇಳಿಕೆ 2 ಮಾತ್ರ ಸರಿ
(3) ಹೇಳಿಕೆ 1 ಮತ್ತು ಹೇಳಿಕೆ 2 ಸರಿ
(4) ಹೇಳಿಕೆ 3 ಮಾತ್ರ ಸರಿ

30. ದ್ವಂದ್ವ ಸಮಾಸಕ್ಕೆ ಸಂಬಂಧಿಸಿದಂತೆ ಈ ಮುಂದಿನ ಹೇಳಿಕೆಗಳನ್ನು ಗಮನಿಸಿ, ಸರಿಯಾದ ಹೇಳಿಕೆ/ಹೇಳಿಕೆಗಳನ್ನು ಗುರುತಿಸಿ.

ಹೇಳಿಕೆ 1 : ಎರಡು ಅಥವಾ ಹೆಚ್ಚು ದ್ವಿತೀಯಾಂತ ನಾಮಪದಗಳು ಸಹಯೋಗದಿಂದ ಕೂಡಿ ಆಗುವ ಸಮಾಸವೇ ದ್ವಂದ್ವ ಸಮಾಸ.

ಹೇಳಿಕೆ 2 : ದ್ವಂದ್ವ ಸಮಾಸದಲ್ಲಿ ಎಲ್ಲಾ ಪದಗಳ ಅರ್ಥಗಳು ಪ್ರಧಾನವಾಗಿರುತ್ತವೆ.

ಹೇಳಿಕೆ 3 : ದ್ವಂದ್ವ ಸಮಾಸದಲ್ಲಿ ಇತರೇತರಯೋಗ, ಸಮಾಹಾರ, ಏಕಶೇಷ ದ್ವಂದ್ವ ಎಂಬ ಮೂರು ಪ್ರಕಾರಗಳಿವೆ.

(1) ಹೇಳಿಕೆ 1 ಮಾತ್ರ ಸರಿ
(2) ಹೇಳಿಕೆ 2 ಮಾತ್ರ ಸರಿ
(3) ಹೇಳಿಕೆ 2 ಮತ್ತು ಹೇಳಿಕೆ 3 ಸರಿ
(4) ಹೇಳಿಕೆ 1 ಮತ್ತು ಹೇಳಿಕೆ 2 ಸರಿ

31. 48916 ಸಂಖ್ಯೆಯ ಕನ್ನಡ ಅಂಕಿಗಳ ರೂಪ ಯಾವುದು?

(1) ೪೮೬೧೯
(2) ೪೮೯೧೬
(3) ೪೯೮೬೧
(4) ೪೮೬೯೧

---

ಕಚ್ಚಾ ಕಾರ್ಯಕ್ಕಾಗಿ ಸ್ಥಳ

೪೮೯೧೬



www.shikarat.com
CamScanner

32. ೫೨೭೩೬ ಸಂಖ್ಯೆಯ ಆಂಗ್ಲ ಅಂಕಿರೂಪ ಯಾವುದು?

(1) 52763 (2) 57263

(3) 52739 (4) 52736

33. ಈ ಮುಂದಿನ ಅನ್ಯದೇಶ್ಯಗಳಲ್ಲಿ ಗುಂಪಿಗೆ ಸೇರದ ಪದವನ್ನು ಗುರುತಿಸಿರಿ.

(1) ಕಂದೀಲು (2) ಕಾಡತೂಸ್

(3) ಖಾವಿಂದ (4) ಬಟಾಟೆ

34. ಈ ವಾಕ್ಯವನ್ನು ಕೆಳಗೆ ನೀಡಿರುವ ಆಯ್ಕೆಗಳ ಸಹಾಯದಿಂದ ಪೂರ್ಣಗೊಳಿಸಿರಿ.

ಗುರುವೊಂದಾದಿಯೊಳು ———

ಗುರುಮೊದಲ್ಮೂರಾಗೆ ———

ಗುರು ನಾಲ್ಕಾಗಿರಲಂತು ———

ಲಘುದ್ವಂದ್ವಂ ಗುರುದ್ವಂದ್ವಮಾಗಿರೆ ———

(1) ಮತ್ತೇಭ – ಉತ್ಪಲಂ – ಸ್ರಗ್ಧರೆ – ಶಾರ್ದೂಲಂ (2) ಮತ್ತೇಭ – ಸ್ರಗ್ಧರೆ – ಶಾರ್ದೂಲಂ – ಉತ್ಪಲಂ

(3) ಉತ್ಪಲಂ – ಶಾರ್ದೂಲಂ – ಸ್ರಗ್ಧರೆ – ಮತ್ತೇಭ (4) ಉತ್ಪಲಂ – ಸ್ರಗ್ಧರೆ – ಶಾರ್ದೂಲಂ – ಮತ್ತೇಭ

35. 'ಮೂಗಾವುದ' – ಈ ಸಮಾಸಪದದ ಸರಿಯಾದ ವಿಗ್ರಹ ವಾಕ್ಯ ರೂಪ ಯಾವುದು?

(1) ಮೂರು + ಕಾವುದ (2) ಮೂರೂ + ಗಾವುದ

(3) ಮೂ + ಗಾವುದ (4) ಮೂರು + ಗಾವುದ

36. 'ಸಪ್ತಸ್ವರಗಳು' ಈ ಸಮಾಸಪದದ ಸರಿಯಾದ ವಿಗ್ರಹ ವಾಕ್ಯ ರೂಪ ಯಾವುದು?

(1) ಸಪ್ತ + ಸ್ವರ (2) ಸಪ್ತ + ಸ್ವರಗಳು

(3) ಸಪ್ತಗಳಾದ + ಸ್ವರಗಳು (4) ಸಪ್ತಗಳು + ಸ್ವರಗಳು

37. 'ವಿರಾಡ್ರೂಪ' ಪದವನ್ನು ಬಿಡಿಸಿ ಸಂಧಿಯನ್ನು ಹೆಸರಿಸಿ.

(1) ವಿರಾಡ್ + ರೂಪ = ಶ್ಚುತ್ವ ಸಂಧಿ

(2) ವಿರಾಟ್ + ರೂಪ = ಜಶ್ತ್ವ ಸಂಧಿ

(3) ವಿರಾಟ್ + ರೂಪ = ಶ್ಚುತ್ವ ಸಂಧಿ

(4) ವಿರಾಡ್ + ರೂಪ = ಜಶ್ತ್ವ ಸಂಧಿ

---

ಕಚ್ಚಾ ಕಾರ್ಯಕ್ಕಾಗಿ ಸ್ಥಳ

52736



www.shikarat.com
CS CamScanner

38. ಈ ಕೆಳಗಿನ ನುಡಿಗಟ್ಟುಗಳು ಹಾಗೂ ಅವುಗಳ ಅರ್ಥಗಳಲ್ಲಿ ತಪ್ಪಾದುದನ್ನು ಗುರುತಿಸಿ.

(1) ಕೈಕೊಡು – ಮೋಸಮಾಡು, ಓಡಿಹೋಗು

(2) ಕೈಕೆಸರು – ಲಂಚ, ಭ್ರಷ್ಟಾಚಾರ

(3) ಹಿಮ್ಮೆಟ್ಟು – ಹಿಂದೆ ಸರಿ, ಕೆಲಸ ಕೈಬಿಡು

(4) ಹೊಟ್ಟೆಯುರಿ – ಹೊಟ್ಟೆನೋವು, ಹೊಟ್ಟೆ ಉರಿವುದು

39. 'ಅ' ಪಟ್ಟಿಯನ್ನು 'ಬ' ಪಟ್ಟಿಯೊಂದಿಗೆ ಹೊಂದಿಸಿ ಬರೆಯಿರಿ.

| ಅ | ಬ |
|---|---|
| (a) ಆಚಾರ ಕೆಟ್ಟರೂ | (i) ಉದರಕ್ಕೆ ಸಿಹಿ |
| (b) ಅಯ್ಯೋ ಅಂದರೆ | (ii) ಬಹುಕೃತ ವೇಷಂ |
| (c) ಅಧರಕ್ಕೆ ಕಹಿ | (iii) ಜಗಳವಿಲ್ಲ |
| (d) ಉದರ ನಿಮಿತ್ತಂ | (iv) ಆಕಾರ ಕೆಡಬಾರದು |
| | (v) ಅರೆ ಆಯಸ್ಸು |

(1) a - ii, b - v, c - iii, d - iv
(2) a - iv, b - iii, c - v, d - ii
(3) a - v, b - i, c - iii, d - ii
(4) a - iv, b - v, c - i, d - ii

40. 'ಮರಗಾಲು' ಯಾವ ಸಮಾಸಕ್ಕೆ ಉದಾಹರಣೆಯಾಗಿದೆ?

(1) ಸಪ್ತಮೀ ತತ್ಪುರುಷ
(2) ಷಷ್ಠೀ ತತ್ಪುರುಷ
(3) ಚತುರ್ಥೀ ತತ್ಪುರುಷ
(4) ತೃತೀಯಾ ತತ್ಪುರುಷ

41. 'ಅ' ಪಟ್ಟಿಯನ್ನು 'ಬ' ಪಟ್ಟಿಯೊಂದಿಗೆ ಹೊಂದಿಸಿ ಬರೆಯಿರಿ.

| ಅ | ಬ |
|---|---|
| (a) ವೃತ | (i) ಜ್ಞಾನ, ಅರಿವು, ವೇದ |
| (b) ವ್ರತ | (ii) ನಿಷ್ಕಾರಣ, ವ್ಯರ್ಥ |
| (c) ವೃಥಾ | (iii) ಕಷ್ಟ, ತೊಂದರೆ |
| (d) ವೇಧೆ | (iv) ನಿಯಮ, ಯಜ್ಞ |
| | (v) ವರಿಸಿದ, ಆವರಿಸಿದ |

(1) a - ii, b - iii, c - iv, d - v
(2) a - i, b - v, c - iii, d - ii
(3) a - iv, b - v, c - iii, d - ii
(4) a - v, b - iv, c - ii, d - iii

ಕಚ್ಚಾ ಕಾರ್ಯಕ್ಕಾಗಿ ಸ್ಥಳ



www.shikarat.com
CamScanner

42. ಈ ಮುಂದಿನ ಪದಗಳಿಗೆ ಸಮಾನಾರ್ಥಗಳನ್ನು ನೀಡಲಾಗಿದೆ. ತಪ್ಪಾಗಿರುವುದನ್ನು ಗುರುತಿಸಿರಿ.

(1) ಅರಿ – ತಿಳಿ, ವೈರಿ

(2) ಅಳಿ – ಭ್ರಮರ, ನಾಶವಾಗು

(3) ಉರಿ – ಉಕ್ಕು, ಉಡು

(4) ಕಾರು – ಮಳೆಗಾಲ, ಕಾರಿಕೊಳ್ಳು

43. 'ಅ' ಪಟ್ಟಿಯೊಂದಿಗೆ 'ಬ' ಪಟ್ಟಿಯನ್ನು ಹೊಂದಿಸಿ ಬರೆಯಿರಿ.

| ಅ | ಬ |
|---|---|
| (a) ವೈಫಲ್ಯ | (i) ಅಲಂಘನ |
| (b) ಸಂಧ್ಯಾಕಾಲ | (ii) ಅಶ್ಲೀಲ |
| (c) ಲಂಘನ | (iii) ಸಾಫಲ್ಯ |
| (d) ಶ್ಲೀಲ | (iv) ಹೊಗಳು |
| | (v) ಪ್ರಾತಃಕಾಲ |

(1) a - v, b - iv, c - ii, d - i

(2) a - iv, b - i, c - iii, d - i

(3) a - iii, b - v, c - i, d - ii

(4) a - i, b - iv, c - iii, d - ii

44. 'ನಿಕಾಲೆ' ಪದದ ಸಮಾನಾರ್ಥಕ ಪದಗಳನ್ನು ನೀಡಿದ್ದು, ಸರಿಯಾಗಿರುವುದನ್ನು ಗುರುತಿಸಿರಿ.

(1) ಪೊದೆ, ಲತಾಗೃಹ
(2) ನಿಶ್ಚಯ, ದಿಟ
(3) ಬಗೆಹರಿಯುವಿಕೆ, ಇತ್ಯರ್ಥ
(4) ಗುಂಪು, ಸಮೂಹ

45. 'ಕಣೆ' ಪದದ ಸಮಾನಾರ್ಥಕ ಪದಗಳನ್ನು ನೀಡಿದ್ದು, ಸರಿಯಾಗಿರುವುದನ್ನು ಗುರುತಿಸಿರಿ.

(1) ಬಾಣ, ಬಿದಿರಿನ ಮೊಳಕೆ
(2) ಬಾಣ, ಮುಳ್ಳುಹಂದಿಯ ಮುಳ್ಳು
(3) ಬಾಣ, ರಣರಂಗ
(4) ನಿಮಿತ್ತ, ಬಾಣ

46. 'ಸೈಗೊಡು' ಪದದ ಸಮಾನಾರ್ಥಕ ಪದಗಳನ್ನು ನೀಡಿದ್ದು, ಸರಿಯಾಗಿರುವುದನ್ನು ಗುರುತಿಸಿರಿ.

(1) ಮಂಕಾಗು, ಸುಕ್ಕಾಗು
(2) ತಾಳು, ಸಹಿಸು
(3) ಅಡ್ಡಬೀಳು, ನಮಸ್ಕರಿಸು
(4) ಒಪ್ಪು, ಸಮ್ಮತಿಸು

---

ಕಚ್ಚಾ ಕಾರ್ಯಕ್ಕಾಗಿ ಸ್ಥಳ



www.shikarat.com

47. ಈ ಕೆಳಗಿನವುಗಳನ್ನು ಹೊಂದಿಸಿ ಬರೆಯಿರಿ.

| | | | |
|---|---|---|---|
| (a) | ಹತ್ತಿಸು | (i) | ತಿರುಕ |
| (b) | ರಪ್ಪು | (ii) | ವಿಸ್ಮೃತಿ |
| (c) | ಧನಿಕ | (iii) | ಕುಗ್ಗಿಸು |
| (d) | ಸ್ಮೃತಿ | (iv) | ಆಮದು |
| | | (v) | ಆರಿಸು |

(1) a - iii, b - ii, c - i, d - iv

(2) a - i, b - iii, c - ii, d - v

(3) a - iv, b - i, c - iii, d - ii

(4) a - v, b - iv, c - i, d - ii

48. 'ಗ್ರಾಮೀಣ' ಪದದ ತದ್ಭವ ರೂಪ ಯಾವುದು?

(1) ಗಾಮೀನ
(2) ಗ್ರಾಮಿನ
(3) ಗಾವಡ
(4) ಗಾವುಂಡ

49. 'ಶ್ರೀವತ್ಸಲಾಂಛನ' ಪದದ ತದ್ಭವ ರೂಪ ಯಾವುದು?

(1) ಸಿರಿವತ್ಸಲಕ್ಷಣ

(2) ಸಿರಿವಚ್ಚಲಚ್ಚಣ

(3) ಸಿರಿವತ್ಸಲಚ್ಚಣ

(4) ಸಿರಿವತ್ಸಲಕ್ಕಣ

50. ಈ ಕೆಳಗಿನವುಗಳಲ್ಲಿ ಎಲ್ಲಾ ತತ್ಸಮಗಳನ್ನು ಹೊಂದಿರುವ ಸರಿಯಾದ ಆಯ್ಕೆಯನ್ನು ಗುರುತಿಸಿರಿ.

(a) ಶತ್ರು, ಶಿಶು, ಶ್ರೀ, ಸ್ತ್ರೀ

(b) ಸಿದ್ದಿ, ಸೀತೆ, ಸಿಸು, ಪಕ್ಕಿ

(c) ಮತಿ, ಯತಿ, ಪತಿ, ಗತಿ

(d) ಲೀಲೆ, ಬಾಲೆ, ಶಮೆ, ವಧೆ

(1) (a) ಮತ್ತು (c)

(2) (a) ಮತ್ತು (b)

(3) (c) ಮತ್ತು (d)

(4) (b) ಮತ್ತು (d)

ಕಚ್ಚಾ ಕಾರ್ಯಕ್ಕಾಗಿ ಸ್ಥಳ



www.shikarat.com
CamScanner

51. 'ಅ' ಪಟ್ಟಿಯನ್ನು 'ಬ' ಪಟ್ಟಿಯೊಂದಿಗೆ ಹೊಂದಿಸಿ ಬರೆಯಿರಿ.

| ಅ | | ಬ | |
|---|---|---|---|
| (a) | ಕ್ಷುತ್ | (i) | ಬಗ್ಗ |
| (b) | ಪಿಶುನ | (ii) | ಹದಿಬದೆ |
| (c) | ಪತಿವ್ರತೆ | (iii) | ಕ್ಷುತ್ತು |
| (d) | ವ್ಯಾಘ್ರ | (iv) | ಹಿಸುಣ |
| | | (v) | ವಿಪತ್ತು |

(1) a - i, b - v, c - ii, d - iv
(2) a - ii, b - iii, c - i, d - v
(3) a - iii, b - iv, c - ii, d - i
(4) a - iii, b - i, c - v, d - iv

52. ಈ ಕೆಳಗಿನ ತತ್ಸಮ ಹಾಗೂ ತದ್ಭವ ಜೋಡಿಗಳಲ್ಲಿ ಸರಿಯಾಗಿರುವುದನ್ನು ಆರಿಸಿರಿ.

(a) ದಾತೃ – ದಾತಾರ
(b) ಗುಣಭಾಜ್ – ಗುಣಭಾಜ
(c) ಯುಗ್ಮ – ಜುಗುಮ
(d) ಶಾಣ – ಸಾಣ

(1) (c), (d) ಮತ್ತು (b) ಸರಿಯಾಗಿವೆ
(2) (b), (c) ಮತ್ತು (d) ಸರಿಯಾಗಿವೆ
(3) (a), (c) ಮತ್ತು (d) ಸರಿಯಾಗಿವೆ
(4) (a), (b) ಮತ್ತು (c) ಸರಿಯಾಗಿವೆ

53. 'ಹಳ್ಳಿಯ ಮುದುಕನು ಒಳಗಿದ್ದ ಹೆಂಡತಿಯನ್ನು ಜೋರಾಗಿ ಕರೆದನು' – ಈ ಸಾಮಾನ್ಯ ವಾಕ್ಯದಲ್ಲಿರುವ ವಾಕ್ಯ ವಿಭಜನೆಯ ಸರಿಯಾದ ಕ್ರಮವನ್ನು ಗುರುತಿಸಿರಿ.

(1) ಕರ್ತೃವಿಶೇಷಣ – ಕರ್ಮವಿಶೇಷಣ – ಕರ್ತೃಪದ – ಕರ್ಮಪದ – ಕ್ರಿಯಾವಿಶೇಷಣ – ಕ್ರಿಯಾಪದ
(2) ಕರ್ತೃವಿಶೇಷಣ – ಕರ್ತೃಪದ – ಕರ್ಮಪದ – ಕರ್ಮವಿಶೇಷಣ – ಕ್ರಿಯಾವಿಶೇಷಣ – ಕ್ರಿಯಾಪದ
(3) ಕರ್ತೃಪದ – ಕರ್ತೃವಿಶೇಷಣ – ಕರ್ಮಪದ – ಕರ್ಮವಿಶೇಷಣ – ಕ್ರಿಯಾಪದ – ಕ್ರಿಯಾವಿಶೇಷಣ
(4) ಕರ್ತೃವಿಶೇಷಣ – ಕರ್ತೃಪದ – ಕರ್ಮವಿಶೇಷಣ – ಕರ್ಮಪದ – ಕ್ರಿಯಾವಿಶೇಷಣ – ಕ್ರಿಯಾಪದ

---

ಕಚ್ಚಾ ಕಾರ್ಯಕ್ಕಾಗಿ ಸ್ಥಳ

1644611



www.shikarat.com
CamScanner

54. ಕ್ರಿಯಾಪದಗಳ ಪ್ರಕಾರಗಳಿಗೆ ಸಂಬಂಧಿಸಿದಂತೆ ಈ ಮುಂದಿನ ಹೇಳಿಕೆಗಳನ್ನು ಗಮನಿಸಿರಿ.

ಹೇಳಿಕೆ 1 : ಕಾಲಾರ್ಥಕ ಕ್ರಿಯಾಪದಗಳಲ್ಲಿ ಪ್ರತಿಯೊಂದು ಕಾಲದ ಆಖ್ಯಾತ ಪ್ರತ್ಯಯಗಳು ಬೇರೆ ಬೇರೆಯಾಗಿರುತ್ತವೆ.

ಹೇಳಿಕೆ 2 : ಆದರೆ ಸಂಶಯಾರ್ಥಕ, ವಿಧ್ಯರ್ಥಕ, ನಿಷೇಧಾರ್ಥಕಗಳಲ್ಲಿಯ ಆಖ್ಯಾತ ಪ್ರತ್ಯಯಗಳು ಮೂರೂ ಕಾಲಗಳನ್ನು ಸೂಚಿಸುತ್ತವೆ.

ಹೇಳಿಕೆ 3 : ಕ್ರಿಯಾಪದಗಳಲ್ಲಿ ಆರು ಪ್ರಕಾರಗಳಿವೆ.

ಈ ಹೇಳಿಕೆಗಳಲ್ಲಿ ತಪ್ಪಾದ ಹೇಳಿಕೆ/ಹೇಳಿಕೆಗಳನ್ನು ಗುರುತಿಸಿರಿ.

(1) ಹೇಳಿಕೆ 1 ಮಾತ್ರ ತಪ್ಪು
(2) ಹೇಳಿಕೆ 2 ಮತ್ತು ಹೇಳಿಕೆ 3 ತಪ್ಪು
(3) ಹೇಳಿಕೆ 1 ಮತ್ತು ಹೇಳಿಕೆ 3 ತಪ್ಪು
(4) ಹೇಳಿಕೆ 3 ಮಾತ್ರ ತಪ್ಪು

55. ಈ ಕೆಳಗಿನ ಹೇಳಿಕೆಗಳಲ್ಲಿ ಸರಿಯಾದ ಹೇಳಿಕೆ/ಹೇಳಿಕೆಗಳನ್ನು ಗುರುತಿಸಿರಿ.

ಹೇಳಿಕೆ 1 : ಕರ್ಮಣಿ ಪ್ರಯೋಗದಲ್ಲಿ ಕರ್ಮಪದವು ಪ್ರಧಾನವಾಗಿರುತ್ತದೆ.

ಹೇಳಿಕೆ 2 : ಕರ್ಮಪದವು ತೃತೀಯಾ ವಿಭಕ್ತಿಯಲ್ಲಿಯೂ, ಕರ್ತೃಪದವು ಪ್ರಥಮಾ ವಿಭಕ್ತಿಯಲ್ಲಿಯೂ ಇರುತ್ತದೆ.

ಹೇಳಿಕೆ 3 : ಕರ್ಮಣಿ ಪ್ರಯೋಗದಲ್ಲಿ ಕ್ರಿಯಾಪದದ ಮೂಲಧಾತು ಮತ್ತು ಆಖ್ಯಾತ ಪ್ರತ್ಯಯಗಳ ನಡುವೆ 'ಅಲ್ ಪಡು' ಪ್ರತ್ಯಯವು ಸೇರುತ್ತದೆ.

(1) ಹೇಳಿಕೆ 1 ಮಾತ್ರ ಸರಿ
(2) ಹೇಳಿಕೆ 3 ಮಾತ್ರ ಸರಿ
(3) ಹೇಳಿಕೆ 1 ಮತ್ತು ಹೇಳಿಕೆ 3 ಸರಿ
(4) ಹೇಳಿಕೆ 1 ಮತ್ತು ಹೇಳಿಕೆ 2 ಸರಿ

56. ಈ ಮುಂದಿನವುಗಳಲ್ಲಿ ಪದದ ಶುದ್ಧ ರೂಪವನ್ನು ಗುರುತಿಸಿರಿ.

(1) ಪಾಶುವೀವೃತ್ತಿ
(2) ಪಾಶುವಿವೃತ್ತಿ
(3) ಪಾಶವಿವೃತ್ತಿ
(4) ಪಾಶವೀವೃತ್ತಿ

57. ಈ ಕೆಳಗಿನ ಪದಗಳ ಸಮಾನಾರ್ಥಕಗಳಲ್ಲಿ ಸರಿಯಾಗಿರುವುದನ್ನು ಗುರುತಿಸಿ.

(1) ಅಗೆ = ಮೊಳಕೆ, ಸಸಿ, ತೋಡು
(2) ಪರಳು = ರತ್ನ, ಔಡಲ ಗಿಡದ ಬೀಜ, ಹೂ
(3) ಅಸ್ತಿ = ಸ್ಥಿತಿ, ಇರುವಿಕೆ, ಎಲುಬು
(4) ಹುರುಳು = ತಿರುಳು, ಸತ್ವ, ಕೆಳಕ್ಕೆ ಬೀಳು

58. ಈ ಕೆಳಗಿನವುಗಳಲ್ಲಿ ಪದ-ಅರ್ಥ ಸಂಯೋಜನೆ ತಪ್ಪಾಗಿರುವ ಆಯ್ಕೆಯನ್ನು ಗುರುತಿಸಿರಿ.

(1) ಪರ್ಪಾಟು – ಗೊಂದಲ, ಗಲಿಬಿಲಿ
(2) ಅವಕಂದಿ – ಅಷ್ಟೊಂದು, ಅಸಾಧ್ಯ
(3) ಅಸವಳಿ – ಶಕ್ತಿಗುಂದು, ಬಳಲು
(4) ಅರಿಕೆ – ಭಿನ್ನಹ, ವಿಜ್ಞಾಪನೆ

ಕಚ್ಚಾ ಕಾರ್ಯಕ್ಕಾಗಿ ಸ್ಥಳ



www.shikarat.com
CamScanner

59. ಈ ಕೆಳಗಿನ ಯಾವುದು ಆಖ್ಯಾತ ಪ್ರತ್ಯಯವನ್ನು ಹತ್ತಿಸಿಕೊಳ್ಳದೆ ಕ್ರಿಯೆಯನ್ನು ಸೂಚಿಸುತ್ತದೆ?

(1) ನಿಷೇದಾರ್ಥಕ
(2) ಕ್ರಿಯಾಪದ
(3) ಧಾತು
(4) ಕಾಲಸೂಚಕ

60. "ಹಚ್ಚೇವು ಕನ್ನಡದ ದೀಪ" – ಈ ವಾಕ್ಯದಲ್ಲಿ ಕ್ರಿಯಾಪದವು ಯಾವ ಅರ್ಥದಲ್ಲಿದೆ?

(1) ನಿಷೇಧಾರ್ಥ
(2) ಸಂಭಾವನಾರ್ಥ
(3) ವಿಧ್ಯರ್ಥ
(4) ಸಾಪೇಕ್ಷಾರ್ಥ

61. ಈ ಕೆಳಗಿನ ಶಬ್ದಸಂಯೋಜನೆಯಲ್ಲಿ ಚೇತನವುಳ್ಳ ವಸ್ತುವಾಚಕ ಸಂಯೋಜನೆಯನ್ನು ಗುರುತಿಸಿ.

(1) ಕೃಷ್ಣ, ನಾಯಿ, ಎತ್ತು, ಮುದುಕ
(2) ಕಲ್ಲು, ನೀರು, ನೆಲ, ಕಾಯಿ
(3) ಬೆಟ್ಟ, ಹೊಲ, ಮನೆ, ನಾಯಿ
(4) ಗುಡಿ, ಹೆಂಗಸು, ಮನೆ, ಕಾಯಿ

62. ಮೊದಲೆರಡು ಪದಗಳ ಸಂಬಂಧವರಿತು, ಮೂರು ಮತ್ತು ನಾಲ್ಕನೇ ಪದ ಬರೆಯಿರಿ.

ರೂಢನಾಮ : ಮನುಷ್ಯ :: ಅನ್ವರ್ಥನಾಮ : ———

(1) ಶಂಕರ
(2) ಪರ್ವತ
(3) ವಿದ್ವಾಂಸ
(4) ಪಟ್ಟಣ

63. ಪದಗಳ ಅಡಿಯಲ್ಲಿ ನೀಡಿರುವ ಸಂಕೇತಗಳ ಸಹಾಯದಿಂದ ಅರ್ಥಬದ್ಧ ವಾಕ್ಯವಾಗಿ ರಚಿಸಿರಿ.

| ನಮಗೆಲ್ಲಾ | ಅಪ್ಯಾಯಮಾನ | ಕಟ್ಟಿಗೆ ಅಭಾವ | ಆದರೆ | ಬಿಸಿನೀರು ಸ್ನಾನ. |
|---|---|---|---|---|
| P | R | Q | T | S |

(1) SPTRQ
(2) SPRTQ
(3) RQSPT
(4) RTQSP

64. 'ಅ' ಪಟ್ಟಿಯನ್ನು 'ಬ' ಪಟ್ಟಿಯೊಂದಿಗೆ ಹೊಂದಿಸಿ ಬರೆಯಿರಿ.

| ಅ | ಬ |
|---|---|
| (a) ತದ್ಧಿತಾಂತ ಭಾವನಾಮ | (i) ಮಾಟ |
| (b) ಗುಣವಾಚಕ | (ii) ಅಂಥದ್ದು |
| (c) ಕೃದಂತ ಭಾವನಾಮ | (iii) ಹಲವು |
| (d) ಪ್ರಕಾರ ವಾಚಕ | (iv) ಚಿಕ್ಕ |
| | (v) ಹಿರಿಮೆ |

(1) a - v, b - iv, c - i, d - ii
(2) a - i, b - v, c - iv, d - ii
(3) a - iii, b - i, c - ii, d - v
(4) a - iv, b - ii, c - v, d - iii

ಕಚ್ಚಾ ಕಾರ್ಯಕ್ಕಾಗಿ ಸ್ಥಳ

P Q T S R



www.shikarat.com

CamScanner

65. ಈ ಮುಂದಿನ ಹೇಳಿಕೆಗಳನ್ನು ಗಮನಿಸಿರಿ.

ಹೇಳಿಕೆ 1 : ಉಪಸರ್ಗಯುಕ್ತ ಶಬ್ದಗಳು ಹೆಚ್ಚಾಗಿ ಸಂಸ್ಕೃತ ಶಬ್ದಗಳಾಗಿವೆ.

ಹೇಳಿಕೆ 2 : ಬೇರೆಯದೇ ಅರ್ಥ ಪಡೆಯಲು ಶಬ್ದದ ಮೊದಲು ಸು, ಪಂ, ಅ, ವಿ, ಅನು, ಸಂ, ದುರ್, ಪ್ರ, ಮುಂ ವಿಶಿಷ್ಟ ಶಬ್ದರೂಪಗಳು (ಪೂರ್ವ ಪ್ರತ್ಯಯ) ಸೇರುವುದುಂಟು.

ಹೇಳಿಕೆ 3 : ಅಭಿ, ನಿ, ಸತ್ ಮುಂತಾದ ಶಬ್ದರೂಪಗಳನ್ನು ಉಪಸರ್ಗಗಳು ಎನ್ನಲಾಗುತ್ತದೆ.

ಈ ಮೇಲಿನ ಹೇಳಿಕೆಗಳಲ್ಲಿ ಸರಿಯಾಗಿರುವ ಹೇಳಿಕೆ/ಹೇಳಿಕೆಗಳನ್ನು ಗುರುತಿಸಿ.

(1) ಹೇಳಿಕೆ 1 ಮಾತ್ರ ಸರಿ
(2) ಹೇಳಿಕೆ 2 ಮಾತ್ರ ಸರಿ
(3) ಹೇಳಿಕೆ 3 ಮಾತ್ರ, ಸರಿ
(4) ಹೇಳಿಕೆ 1, 2 ಮತ್ತು 3 ಸರಿ

66. ಒಂದು ಭಾಷೆಯಲ್ಲಿ ವಿಶೇಷ ಹಾಗೂ ಸ್ಥಿರವಾಗಿರುವ ಅನ್ಯಭಾಷೆಗಳಿಂದ ಸೇರಿಸಿಕೊಳ್ಳಲಾಗದ ವ್ಯಾಕರಣಾಂಶ ಯಾವುದು?

(1) ಸರ್ವನಾಮಗಳು
(2) ಕ್ರಿಯಾಪದಗಳು
(3) ಗುಣವಾಚಕಗಳು
(4) ಲಿಂಗಗಳು

67. ಕನ್ನಡದಲ್ಲಿ ಬಳಕೆಯಲ್ಲಿ ಇಲ್ಲದ ಸರ್ವನಾಮಗಳೆಂದರೆ :

(1) ಪುರುಷಾರ್ಥಕ ಸರ್ವನಾಮಗಳು
(2) ಆತ್ಮಾರ್ಥಕ ಸರ್ವನಾಮಗಳು
(3) ಪ್ರಶ್ನಾರ್ಥಕ ಸರ್ವನಾಮಗಳು
(4) ಸಂಬಂಧಾರ್ಥಕ ಸರ್ವನಾಮಗಳು

68. ಕೇಶೀರಾಜ ಹೇಳಿರುವಂತೆ ಯಾವ ಎರಡು ಗುಣವಾಚಕಗಳು ಹೊಸಗನ್ನಡದಲ್ಲಿ ಬಹುಮಟ್ಟಿಗೆ ಕಡಿಮೆ ಪ್ರಯೋಗವಾಗಿವೆ?

(1) ಯದು – ಯವು
(2) ತುಕಾರಾಂತ – ದುಕಾರಾಂತ
(3) ಅಪ್ಪ – ಅವ ಶಬ್ದಗಳು
(4) ಅನಿತು – ಇನಿತು

69. ಬಹುವಚನಕ್ಕೆ ಸಂಬಂಧಿಸಿದಂತೆ ಈ ಮುಂದಿನ ಹೇಳಿಕೆಗಳನ್ನು ಗಮನಿಸಿ, ತಪ್ಪಾದ ಹೇಳಿಕೆ/ಹೇಳಿಕೆಗಳನ್ನು ಗುರುತಿಸಿರಿ.

ಹೇಳಿಕೆ 1 : ಅಣ್ಣಂದಿರು, ಅಣ್ಣಂದಿರುಗಳು – ಇವುಗಳ ಅರ್ಥದಲ್ಲಿ ಭೇದವಿಲ್ಲದಿದ್ದರೂ ಹಾಗೆ ಪ್ರಯೋಗಗಳಿರುತ್ತವೆ.

ಹೇಳಿಕೆ 2 : 'ವಿರು'–ಪ್ರತ್ಯಯವು ಸ್ತ್ರೀಲಿಂಗದಲ್ಲಿ ಮಾತ್ರ ಕ್ವಚಿತ್ತಾಗಿ ಆಗಮವಾಗುವುದು.

ಹೇಳಿಕೆ 3 : ಸರ್ವನಾಮ, ಗುಣವಚನ, ಪುಲ್ಲಿಂಗ ಮತ್ತು ಬಹುವಚನದಲ್ಲಿ ಮಾತ್ರ 'ವು' ಆಗಮವಾಗಿ ಬರುತ್ತದೆ.

(1) ಹೇಳಿಕೆ 1 ಮಾತ್ರ, ತಪ್ಪು
(2) ಹೇಳಿಕೆ 2 ಮಾತ್ರ, ತಪ್ಪು
(3) ಹೇಳಿಕೆ 3 ಮಾತ್ರ, ತಪ್ಪು
(4) ಹೇಳಿಕೆ 1 ಮತ್ತು ಹೇಳಿಕೆ 3 ತಪ್ಪು

---

ಕಚ್ಚಾ ಕಾರ್ಯಕ್ಕಾಗಿ ಸ್ಥಳ



www.shikarat.com

CamScanner

70. 'ಅ' ಪಟ್ಟಿಯನ್ನು 'ಬ' ಪಟ್ಟಿಯೊಂದಿಗೆ ಹೊಂದಿಸಿ ಬರೆಯಿರಿ.

| ಅ | | ಬ | |
|---|---|---|---|
| (a) | ಗುಣವಾಚಕ ವಿಶೇಷಣ | (i) | ನಾವು ನಮ್ಮ ಮಾತೃಭೂಮಿಯನ್ನು ಪ್ರೀತಿಸಬೇಕು. |
| (b) | ಪರಿಮಾಣವಾಚಕ ವಿಶೇಷಣ | (ii) | ಗಾಂಧೀಜಿಯವರ ವಿಚಾರಗಳು ಬಹಳ ಪ್ರಸಿದ್ಧವಾಗಿವೆ. |
| (c) | ಸಂಬಂಧವಾಚಕ ವಿಶೇಷಣ | (iii) | ಇದು ಯಾರ ಪುಸ್ತಕ? |
| (d) | ವ್ಯಕ್ತಿವಾಚಕ ವಿಶೇಷಣ | (iv) | ಅವನೊಬ್ಬ ಪ್ರಾಮಾಣಿಕ ಮನುಷ್ಯ. |
| | | (v) | ನನ್ನಲ್ಲಿ ಸಾಕಷ್ಟು ಹಣವಿದೆ. |

(1) a - iv, b - v, c - i, d - ii

(2) a - v, b - iv, c - ii, d - i

(3) a - iii, b - iv, c - v, d - i

(4) a - ii, b - iii, c - i, d - iv

71. 'ಅ' ಪಟ್ಟಿಯನ್ನು 'ಬ' ಪಟ್ಟಿಯೊಂದಿಗೆ ಹೊಂದಿಸಿ ಬರೆಯಿರಿ.

| ಅ | | ಬ | |
|---|---|---|---|
| (a) | ವಾಚ್ಯಲಿಂಗ | (i) | ದೇವತೆ, ಸರಸ್ವತಿ, ಲಕ್ಷ್ಮೀ |
| (b) | ನಿತ್ಯನಪುಂಸಕ ಲಿಂಗ | (ii) | ಬಂಗಾರ, ಬಳಪ, ಹಲಗೆ |
| (c) | ಪುನ್ನಪುಂಸಕ ಲಿಂಗ | (iii) | ನಾನು, ಎಲ್ಲಾ, ಒಳ್ಳೆಯ |
| (d) | ಸ್ತ್ರೀನಪುಂಸಕ ಲಿಂಗ | (iv) | ಜನ, ಕೂಸು, ದಂಡು |
| | | (v) | ಶನಿ, ಸೂರ್ಯ, ಮಂಗಳ |

(1) a - iii, b - v, c - iv, d - ii

(2) a - iii, b - iv, c - v, d - i

(3) a - ii, b - v, c - iii, d - i

(4) a - iv, b - ii, c - iii, d - i

72. ಕನ್ನಡದಲ್ಲಿ ಲಿಂಗವು ಒಂಬತ್ತು ತರವೆಂದೂ ಆದರಲ್ಲಿ ಮೂರು ಮಾತ್ರ ಪ್ರಸಿದ್ಧ ಎಂದವರು ಯಾರು?

(1) ಕೇಶೀರಾಜ

(2) ಭಟ್ಟಕಳಂಕ

(3) ನಾಗವರ್ಮ

(4) ನಾಗಚಂದ್ರ

ಕಚ್ಚಾ ಕಾರ್ಯಕ್ಕಾಗಿ ಸ್ಥಳ



www.shikarat.com
CamScanner

73. 'ವಚನ' ವ್ಯಾಕರಣಾಂಶಕ್ಕೆ ಸಂಬಂಧಿಸಿದಂತೆ ಈ ಮುಂದಿನ ಹೇಳಿಕೆಗಳನ್ನು ಗಮನಿಸಿ, ಸರಿಯಾಗಿರುವುದನ್ನು ಗುರುತಿಸಿರಿ.

ಹೇಳಿಕೆ 1 : ಗಳ್, ಕಳ್ – ಇವು ಸಾಮಾನ್ಯವಾಗಿ ನಪುಂಸಕ ಲಿಂಗ ಶಬ್ದಗಳಿಗೆ ಸೇರುತ್ತವೆ.

ಹೇಳಿಕೆ 2 : ಗಳ್, ಕಳ್ – ಇವು ಕೆಲವು ವೇಳೆ ಸ್ತ್ರೀಲಿಂಗ ಪುಲ್ಲಿಂಗ ಶಬ್ದಗಳಿಗೆ ಸೇರುವುದುಂಟು.

ಹೇಳಿಕೆ 3 : ಅರ್, ಇರ್, ದಿರ್, ವಿರ್ – ಇವು ಸ್ತ್ರೀಲಿಂಗ ಪುಲ್ಲಿಂಗ ಶಬ್ದಗಳಿಗೆ ಸೇರುವುದುಂಟು.

(1) ಹೇಳಿಕೆ 1 ಮಾತ್ರ ಸರಿ
(2) ಹೇಳಿಕೆ 2 ಮಾತ್ರ ಸರಿ
(3) ಹೇಳಿಕೆ 1 ಮತ್ತು ಹೇಳಿಕೆ 3 ಸರಿ
(4) ಹೇಳಿಕೆ 1, ಹೇಳಿಕೆ 2 ಮತ್ತು ಹೇಳಿಕೆ 3 ಸರಿ

74. ಈ ಕೆಳಗಿನ ಪದಗಳ ಸಂಯೋಜನೆಯಲ್ಲಿ ಗುಂಪಿಗೆ ಸೇರದ ಸಂಯೋಜನೆಯನ್ನು ತೆಗೆದುಹಾಕಿ.

(1) ತಣ್ಣತಣ್ಣನೆ, ಮೆಲ್ಲಮೆಲ್ಲಗೆ, ಕೆಟಿಕೆಟಿಗೆ, ಮೇಮೇಗು
(2) ಬೆಳಬೆಳಗಿದಂ, ತೊಳತೊಳಗುವ, ಪೋದಪೋದಂ, ಮನೆಮನೆಗಳ್
(3) ತುತ್ತತುದಿ, ಕಟ್ಟಕಡೆ, ನಟ್ಟನಡು, ಮೊತ್ತಮೊದಲು
(4) ಸರಸರ, ದಡದಡ, ಥಳಥಳ, ಅಕಟಕಟಾ

75. 'ಅ' ಪಟ್ಟಿಯನ್ನು 'ಬ' ಪಟ್ಟಿಯೊಂದಿಗೆ ಹೊಂದಿಸಿ ಬರೆಯಿರಿ.

| ಅ | ಬ |
|---|---|
| (a) ಸಾಮೀಪ್ಯ | (i) ಲೇಸು ಲೇಸು |
| (b) ಸಂಭ್ರಮ | (ii) ತುತ್ತ ತುದಿ |
| (c) ಬಾಧೆ | (iii) ಕುಡು ಕುಡು |
| (d) ಆಧಿಕ್ಯ | (iv) ಪುಲಿ ಪುಲಿ |
| | (v) ಇದೆ ಇದೆ |

(1) a - iii, b - iv, c - ii, d - v
(2) a - v, b - iii, c - iv, d - i
(3) a - iv, b - v, c - i, d - ii
(4) a - ii, b - v, c - i, d - iii

76. ಈ ಕೆಳಗಿನ ತದ್ಧಿತಾಂತ ಪ್ರತ್ಯಯಗಳ ಸಂಯೋಜನೆಯಲ್ಲಿ ಸರಿಯಾದ ಸಂಯೋಜನೆಯನ್ನು ಗುರುತಿಸಿರಿ.

(1) ಗಾರ, ಅಡಿಗ, ಅಳಿ, ಅರ
(2) ಉ, ಅನ್ನು, ಅಲ್ಲಿ, ಅ
(3) ಅಮ್, ಅರ್, ಅನ್, ಇವು
(4) ದ, ದಪ, ಗಾರ, ಕಾರ

---

ಕಚ್ಚಾ ಕಾರ್ಯಕ್ಕಾಗಿ ಸ್ಥಳ


www.shikarat.com
CamScanner

77. ಕೆಳಗಿನ ಜೋಡಿಗಳಲ್ಲಿ ಸರಿಯಾಗಿ ಹೊಂದಾಣಿಕೆಯಾಗಿರುವುದನ್ನು ಗುರುತಿಸಿರಿ.

(1) ಬಳೆಗಾರ – ತದ್ಧಿತಾಂತ

(2) ಬಡತನ – ಗುಣವಾಚಕ

(3) ಮಾಡುತ್ತಾನೆ – ಕೃದಂತ

(4) ಮಾಡಿದ – ನಿಷೇಧಾರ್ಥಕ

78. ಈ ಕೆಳಗಿನ ಸಂಯೋಜನೆಯಲ್ಲಿ ತದ್ಧಿತಾಂತವಲ್ಲದ ಸಂಯೋಜನೆಯನ್ನು ಗುರುತಿಸಿರಿ.

(1) ಒಕ್ಕಲಿಗ, ಮೋಸಗಾರ, ದೊಡ್ಡತನ, ಹೂಗಾರ

(2) ಹೂವಾಡಗಿತ್ತಿ, ಬಳೆಗಾರ, ಹಾಡುಗಾರ, ಗೌಡತಿ

(3) ಹೆಗ್ಗಡತಿ, ಲೆಕ್ಕಿಗ, ಹಣವಂತ, ಮನೆಗಾಗಿ

(4) ಹತ್ತನೆಯ, ಕಂಬಾರ, ಮಡಿವಾಳ, ಓಲೆಕಾರ

79. ಹಳೆಗನ್ನಡ, ನಡುಗನ್ನಡ ಹಾಗೂ ಹೊಸಗನ್ನಡದಲ್ಲಿ ಬದಲಾವಣೆ ಹೊಂದದೆ ಹಾಗೆಯೇ ಉಳಿದುಬಂದಿರುವ ವಿಭ ಪ್ರತ್ಯಯಗಳನ್ನು ಗುರುತಿಸಿರಿ.

(1) ತೃತೀಯ, ಚತುರ್ಥಿ, ಷಷ್ಠಿ

(2) ತೃತೀಯ, ಪ್ರಥಮ, ಪಂಚಮಿ

(3) ಷಷ್ಠಿ, ಸಪ್ತಮಿ, ದ್ವಿತೀಯ

(4) ಚತುರ್ಥಿ, ತೃತೀಯ, ಸಪ್ತಮಿ

80. 'ಸಂಶಯದೊಳ್' ಅಡಿಗೆರೆ ಎಳೆದ ಶಬ್ದದಲ್ಲಿರುವ ವಿಭಕ್ತಿ ಪ್ರತ್ಯಯ ಯಾವುದು?

(1) ಷಷ್ಠಿ (2) ದ್ವಿತೀಯಾ

(3) ಸಪ್ತಮಿ (4) ಸಂಬೋಧನಾ

81. ಕೆಳಗಿನ ಪದಗಳನ್ನು ಹೊಂದಿಸಿ ಬರೆಯಿರಿ.

| ಅ | | ಬ |
|---|---|---|
| (a) ಬಂಡಿಗೆ ಹತ್ತಿದನು | (i) | ಸಪ್ತಮಿಯರ್ಥದಲ್ಲಿ ಚತುರ್ಥಿ |
| (b) ಮನೆಗೆ ಯಜಮಾನ | (ii) | ದ್ವಿತೀಯಾರ್ಥದಲ್ಲಿ ಚತುರ್ಥಿ |
| (c) ಹಳ್ಳಕ್ಕೆ ಬಿದ್ದನು | (iii) | ಷಷ್ಠ್ಯರ್ಥದಲ್ಲಿ ಚತುರ್ಥಿ |
| (d) ಆತನಿಂದ ಕೇಡಾಯಿತು | (iv) | ಪ್ರಥಮಾರ್ಥದಲ್ಲಿ ದ್ವಿತೀಯ |
| | (v) | ಪಂಚಮಿಯರ್ಥದಲ್ಲಿ ತೃತೀಯ |

(1) a - iv, b - v, c - iii, d - i (2) a - ii, b - v, c - iv, d - i

(3) a - v, b - iv, c - i, d - ii (4) a - ii, b - iii, c - i, d - v

ಕಚ್ಚಾ ಕಾರ್ಯಕ್ಕಾಗಿ ಸ್ಥಳ



www.shikarat.com

CS CamScanner

82. ಕೇಶೀರಾಜನ ಪ್ರಕಾರ ಅಚ್ಚಗನ್ನಡ ವರ್ಣಮಾಲೆಯಲ್ಲಿರುವ ಅಕ್ಷರಗಳ ಸಂಖ್ಯೆ ಎಷ್ಟು?

(1) 47
(2) 48
(3) 49
(4) 50

83. ಈ ಕೆಳಗಿನ ಗಾದೆ ಮಾತನ್ನು ಪೂರ್ಣಗೊಳಿಸಿ.

——— ಮಾತು ತುಪ್ಪವಿಲ್ಲದ ಊಟ.

(1) ತೆಪ್ಪಗಿಲ್ಲದ
(2) ಒಪ್ಪವಿಲ್ಲದ
(3) ತಪ್ಪಿಲ್ಲದ
(4) ಸವಿಯಿಲ್ಲದ

84. ಈ ಕೆಳಗಿನ ನುಡಿಗಟ್ಟುಗಳನ್ನು ಅವುಗಳ ಅರ್ಥದೊಂದಿಗೆ ಹೊಂದಿಸಿ ಬರೆಯಿರಿ.

| | | | |
|---|---|---|---|
| (a) | ಹಲ್ಲುಕಿಸಿ | (i) | ಗದ್ಗದಿತನಾಗು |
| (b) | ರಾಮಬಾಣ | (ii) | ಅವಮಾನ ಹೊಂದು |
| (c) | ಮುಖ ಕಪ್ಪಾಗು | (iii) | ಪೆಚ್ಚಾಗು |
| (d) | ಗಂಟಲು ಕಟ್ಟು | (iv) | ಮೋಸಮಾಡು |
| | | (v) | ವಿಫಲವಾಗದ್ದು |

(1) a - v, b - ii, c - i, d - iv
(2) a - i, b - v, c - iv, d - ii
(3) a - iii, b - v, c - ii, d - i
(4) a - ii, b - iii, c - i, d - v

85. ಗುಂಪಿಗೆ ಸೇರದ ಪದವನ್ನು ಗುರುತಿಸಿರಿ.

ಅಂತೆ, ಓಸುಗ, ತನಕ, ವಂತ, ಸಲುವಾಗಿ

(1) ಅಂತೆ
(2) ವಂತ
(3) ಓಸುಗ
(4) ಸಲುವಾಗಿ

86. ಸರಿಯಾದ ಲೇಖನ ಚಿಹ್ನೆಗಳಿರುವ ವಾಕ್ಯವನ್ನು ಗುರುತಿಸಿರಿ.

(1) ''ಕರ್ಣ! ಹಾಗೆಯೇ ಆಗಲಿ; ಅಂತು ಕೌರವರು ಕ್ಷಯ ಹೊಂದುತ್ತಾರೆ. ಏನು ಮಾಡುವುದು? ದೈವ ಬಲವಾದದ್ದು; ನಿನಗೆ ಶುಭವಾಗಲಿ.''

(2) ''ಕರ್ಣ ಹಾಗೆಯೇ ಆಗಲಿ, ಅಂತು ಕೌರವರು ಕ್ಷಯ ಹೊಂದುತ್ತಾರೆ! ಏನು ಮಾಡುವುದು? ದೈವ ಬಲವಾದದ್ದು, ನಿನಗೆ ಶುಭವಾಗಲಿ!''

(3) ''ಕರ್ಣ! ಹಾಗೆಯೇ ಆಗಲಿ; ಅಂತು ಕೌರವರು ಕ್ಷಯ ಹೊಂದುತ್ತಾರೆ; ಏನು ಮಾಡುವುದು? ದೈವ ಬಲವಾದದ್ದು! ನಿನಗೆ ಶುಭವಾಗಲಿ!''

(4) ''ಕರ್ಣ, ಹಾಗೆಯೇ ಆಗಲಿ, ಅಂತು ಕೌರವರು ಕ್ಷಯ ಹೊಂದುತ್ತಾರೆ. ಏನು ಮಾಡುವುದು? ದೈವ ಬಲವಾದದ್ದು; ನಿನಗೆ ಶುಭವಾಗಲಿ''

---

**ಕಚ್ಚಾ ಕಾರ್ಯಕ್ಕಾಗಿ ಸ್ಥಳ**



www.shikarat.com
CS CamScanner

82. ಕೇಶಿರಾಜನ ಪ್ರಕಾರ ಅಚ್ಚಗನ್ನಡ ವರ್ಣಮಾಲೆಯಲ್ಲಿರುವ ಅಕ್ಷರಗಳ ಸಂಖ್ಯೆ ಎಷ್ಟು?

(1) 47
(2) 48
(3) 49
(4) 50

83. ಈ ಕೆಳಗಿನ ಗಾದೆ ಮಾತನ್ನು ಪೂರ್ಣಗೊಳಿಸಿ.

——— ಮಾತು ತುಪ್ಪವಿಲ್ಲದ ಊಟ.

(1) ತೆಪ್ಪಗಿಲ್ಲದ
(2) ಒಪ್ಪವಿಲ್ಲದ
(3) ತಪ್ಪಿಲ್ಲದ
(4) ಸವಿಯಿಲ್ಲದ

84. ಈ ಕೆಳಗಿನ ನುಡಿಗಟ್ಟುಗಳನ್ನು ಅವುಗಳ ಅರ್ಥದೊಂದಿಗೆ ಹೊಂದಿಸಿ ಬರೆಯಿರಿ.

| | | | |
|---|---|---|---|
| (a) | ಹಲ್ಲುಕಿಸಿ | (i) | ಗದ್ಗದಿತನಾಗು |
| (b) | ರಾಮಬಾಣ | (ii) | ಅವಮಾನ ಹೊಂದು |
| (c) | ಮುಖ ಕಪ್ಪಾಗು | (iii) | ಪೆಚ್ಚಾಗು |
| (d) | ಗಂಟಲು ಕಟ್ಟು | (iv) | ಮೋಸಮಾಡು |
| | | (v) | ವಿಫಲವಾಗದ್ದು |

(1) a - v, b - ii, c - i, d - iv
(2) a - i, b - v, c - iv, d - ii
(3) a - iii, b - v, c - ii, d - i
(4) a - ii, b - iii, c - i, d - v

85. ಗುಂಪಿಗೆ ಸೇರದ ಪದವನ್ನು ಗುರುತಿಸಿರಿ.

ಅಂತೆ, ಓಸುಗ, ತನಕ, ವಂತ, ಸಲುವಾಗಿ

(1) ಅಂತೆ
(2) ವಂತ
(3) ಓಸುಗ
(4) ಸಲುವಾಗಿ

86. ಸರಿಯಾದ ಲೇಖನ ಚಿಹ್ನೆಗಳಿರುವ ವಾಕ್ಯವನ್ನು ಗುರುತಿಸಿರಿ.

(1) ''ಕರ್ಣ! ಹಾಗೆಯೇ ಆಗಲಿ; ಅಂತು ಕೌರವರು ಕ್ಷಯ ಹೊಂದುತ್ತಾರೆ. ಏನು ಮಾಡುವುದು? ದೈವ ಬಲವಾದದ್ದು; ನಿನಗೆ ಶುಭವಾಗಲಿ.''

(2) ''ಕರ್ಣ ಹಾಗೆಯೇ ಆಗಲಿ, ಅಂತು ಕೌರವರು ಕ್ಷಯ ಹೊಂದುತ್ತಾರೆ! ಏನು ಮಾಡುವುದು? ದೈವ ಬಲವಾದದ್ದು, ನಿನಗೆ ಶುಭವಾಗಲಿ!''

(3) ''ಕರ್ಣ! ಹಾಗೆಯೇ ಆಗಲಿ; ಅಂತು ಕೌರವರು ಕ್ಷಯ ಹೊಂದುತ್ತಾರೆ; ಏನು ಮಾಡುವುದು? ದೈವ ಬಲವಾದದ್ದು! ನಿನಗೆ ಶುಭವಾಗಲಿ!''

(4) ''ಕರ್ಣ, ಹಾಗೆಯೇ ಆಗಲಿ, ಅಂತು ಕೌರವರು ಕ್ಷಯ ಹೊಂದುತ್ತಾರೆ. ಏನು ಮಾಡುವುದು? ದೈವ ಬಲವಾದದ್ದು; ನಿನಗೆ ಶುಭವಾಗಲಿ''

## ಕಚ್ಚಾ ಕಾರ್ಯಕ್ಕಾಗಿ ಸ್ಥಳ



www.shikarat.com
CamScanner

87. ಸರಿಯಾದ ಲೇಖನ ಚಿಹ್ನೆಗಳಿರುವ ವಾಕ್ಯವನ್ನು ಗುರುತಿಸಿರಿ.

(1) ''ಉಪ್ಪಿನಕಾಯಿ ಭೋ ಚೆಂದಾಗಿದೆ'' ಎಂದ ಇನ್ನೊಬ್ಬ; ''ಇನ್ನೂ ಹಾಕ್ಲೇನಪ್ಪ?'' ಎಂದರು ಪುಟ್ಟಮ್ಮ. ''ಕೇಳೂದ್ಯಾಕೆ? ಹಾಕು ಜಲ್ದಿ'' ಎಂದ ನಂಜ.

(2) ''ಉಪ್ಪಿನಕಾಯಿ ಭೋ ಚೆಂದಾಗಿದೆ'' ಎಂದ ಇನ್ನೊಬ್ಬ, ''ಇನ್ನೂ ಹಾಕ್ಲೇನಪ್ಪ'' ಎಂದರು ಪುಟ್ಟಮ್ಮ; ''ಕೇಳೂದ್ಯಾಕೆ ಹಾಕು ಜಲ್ದಿ'' ಎಂದ ನಂಜ.

(3) ''ಉಪ್ಪಿನಕಾಯಿ ಭೋ ಚೆಂದಾಗಿದೆ'' ಎಂದ ಇನ್ನೊಬ್ಬ. ''ಇನ್ನೂ ಹಾಕ್ಲೇನಪ್ಪ?'' ಎಂದರು ಪುಟ್ಟಮ್ಮ. ''ಕೇಳೂದ್ಯಾಕೆ ಹಾಕು ಜಲ್ದಿ'' ಎಂದ ನಂಜ.

(4) ''ಉಪ್ಪಿನಕಾಯಿ ಭೋ ಚೆಂದಾಗಿದೆ'' ಎಂದ, ಇನ್ನೊಬ್ಬ, ''ಇನ್ನೂ ಹಾಕ್ಲೇನಪ್ಪ?'' ಎಂದರು ಪುಟ್ಟಮ್ಮ, ''ಕೇಳೂದ್ಯಾಕೆ ಹಾಕು ಜಲ್ದಿ'' ಎಂದ ನಂಜ.

88. 'ಅ' ಪಟ್ಟಿಯಲ್ಲಿನ ಕೃದಂತದ ಪ್ರಕಾರಗಳಿಗೆ 'ಬ' ಪಟ್ಟಿಯಲ್ಲಿನ ಪ್ರತ್ಯಯಗಳನ್ನು ಹೊಂದಿಸಿ ಬರೆಯಿರಿ.

| ಅ | | ಬ | |
|---|---|---|---|
| (a) | ಕೃದಂತ ಧಾತು | (i) | ಇಕೆ |
| (b) | ಕೃನ್ನಾಮ | (ii) | ಚು |
| (c) | ಕೃದ್ ಭಾವನಾಮ | (iii) | ಉತ್ತ/ಉತ್ತಾ |
| (d) | ಕೃದಂತಾವ್ಯಯ | (iv) | ಅರೆ |
| | | (v) | ದ, ಅದ, ವ, ಉವ |

(1) a - iii, b - v, c - iv, d - ii
(2) a - iii, b - iv, c - ii, d - i
(3) a - ii, b - i, c - v, d - iii
(4) a - ii, b - v, c - i, d - iii

89. 'ಅ' ಪಟ್ಟಿಯನ್ನು 'ಬ' ಪಟ್ಟಿಯೊಂದಿಗೆ ಹೊಂದಿಸಿ ಬರೆಯಿರಿ.

| ಅ (ವಿಭಕ್ತಿ ಪಲ್ಲಟ) | | ಬ (ಉದಾಹರಣೆ) | |
|---|---|---|---|
| (a) | ದ್ವಿತೀಯದ ಸ್ಥಳದಲ್ಲಿ ಪ್ರಥಮ | (i) | ನಾವು ಪ್ರವಾಸ ಮಾಡಿದೆವು |
| (b) | ಸಪ್ತಮಿಯ ಸ್ಥಳದಲ್ಲಿ ಪ್ರಥಮ | (ii) | ಅಧರ್ಮಕ್ಕೆ ಹೇಸಿದೆನು |
| (c) | ದ್ವಿತೀಯದ ಸ್ಥಳದಲ್ಲಿ ಷಷ್ಠೀ | (iii) | ರಾತ್ರಿ ಜಾಗರಣೆ ಮಾಡಬೇಡ |
| (d) | ಪಂಚಮಿಯ ಸ್ಥಳದಲ್ಲಿ ಚತುರ್ಥಿ | (iv) | ಕಣ್ಣಲ್ಲಿ ನೋಡಿದೆವು |
| | | (v) | ಅವರು ಹಾಡು ಹಾಡಿದರು |

(1) a - v, b - iii, c - i, d - ii
(2) a - ii, b - i, c - v, d - iv
(3) a - v, b - iv, c - iii, d - ii
(4) a - ii, b - v, c - i, d - iv

ಕಚ್ಚಾ ಕಾರ್ಯಕ್ಕಾಗಿ ಸ್ಥಳ



www.shikarat.com
CamScanner

90. 'ಅ' ಪಟ್ಟಿಯನ್ನು 'ಬ' ಪಟ್ಟಿಯೊಂದಿಗೆ ಹೊಂದಿಸಿ ಬರೆಯಿರಿ.

| ಅ | ಬ |
|---|---|
| (a) ಮ್ | (i) ದ್ವಿತೀಯ ವಿಭಕ್ತಿ |
| (b) ಅಮ್ | (ii) ಸಪ್ತಮೀ ವಿಭಕ್ತಿ |
| (c) ಅತ್ | (iii) ಪ್ರಥಮಾ ವಿಭಕ್ತಿ |
| (d) ಒಳ್ | (iv) ಪಂಚಮೀ ವಿಭಕ್ತಿ |
| | (v) ತೃತೀಯಾ ವಿಭಕ್ತಿ |

(1) a - iii, b - i, c - iv, d - ii

(2) a - iii, b - iv, c - ii, d - i

(3) a - v, b - iii, c - i, d - ii

(4) a - ii, b - i, c - iv, d - iii

91. ಈ ಮುಂದಿನವುಗಳಲ್ಲಿ ಗುಂಪಿಗೆ ಸೇರದ ಸಂಧಿಪದಗಳನ್ನು ಗುರುತಿಸಿರಿ.

(1) ದೇವೇಂದ್ರ, ಏಕೋನ, ಮಹರ್ಷಿ, ವಾಲ್ಮೀಕಿ

(2) ಏಕೈಕ, ವನೌಷಧ, ಜನೈಕ್ಯ, ಅಷ್ಟೈಶ್ವರ್ಯ

(3) ಅತ್ಯಂತ, ಮನ್ವಂತರ, ಕರ್ತ್ರರ್ಥ, ಮಾತ್ರಾಂಶ

(4) ಷಡಾನನ, ಸದಾನಂದ, ಅಬ್ಧಿ, ಅಜಂತ

92. ಮುಂದಿನ ಸಂಧಿ ಪದಗಳಲ್ಲಿ ಗುಂಪಿಗೆ ಸೇರದ ಪದವನ್ನು ಗುರುತಿಸಿರಿ.

(1) ಮನಶ್ಚಂಚಲ (2) ಸನ್ಮಾನ

(3) ಅಮ್ಮಯ (4) ಷಣ್ಮುಖ

93. ಆಗಮಸಂಧಿಗೆ ಸಂಬಂಧಿಸಿದಂತೆ ಈ ಮುಂದಿನ ಹೇಳಿಕೆಗಳನ್ನು ಗಮನಿಸಿ, ತಪ್ಪಾದ ಹೇಳಿಕೆ/ಹೇಳಿಕೆಗಳನ್ನು ಗುರುತಿಸಿರಿ.

ಹೇಳಿಕೆ 1 : ಅ, ಆ, ಇ, ಈ, ಎ, ಏ, ಐ, ಒ, ಓ ಸ್ವರಗಳ ಮುಂದೆ ಸ್ವರ ಬಂದಾಗ 'ಯ' ಕಾರವು ಆಗಮವಾಗುತ್ತದೆ.

ಹೇಳಿಕೆ 2 : 'ಈ' ಸ್ವರದ ಮುಂದೆ ಉ, ಊ, ಒ, ಓ ಸ್ವರಗಳು ಬಂದರೆ 'ಯ' ಕಾರವಾಗಲೀ, 'ವ' ಕಾರವಾಗಲೀ ಆಗಮವಾಗುತ್ತದೆ.

ಹೇಳಿಕೆ 3 : ಉ, ಊ, ಋ, ಓ ಸ್ವರಗಳ ಮುಂದೆ ಸ್ವರವು ಬಂದರೆ 'ವ' ಕಾರವು ಆಗಮವಾಗುತ್ತದೆ.

(1) ಹೇಳಿಕೆ 1 ತಪ್ಪು (2) ಹೇಳಿಕೆ 2 ತಪ್ಪು

(3) ಹೇಳಿಕೆ 1 ಮತ್ತು ಹೇಳಿಕೆ 3 ತಪ್ಪು (4) ಹೇಳಿಕೆ 1 ಮತ್ತು ಹೇಳಿಕೆ 2 ತಪ್ಪು

---

ಕಚ್ಚಾ ಕಾರ್ಯಕ್ಕಾಗಿ ಸ್ಥಳ



www.shikarat.com

CamScanner

94. 'ಅ' ಪಟ್ಟಿಯನ್ನು 'ಬ' ಪಟ್ಟಿಯೊಂದಿಗೆ ಹೊಂದಿಸಿ ಬರೆಯಿರಿ.

| ಅ | | ಬ |
|---|---|---|
| (a) ಮಲ್ವಾವು | (i) | 'ತ' ಕಾರಕ್ಕೆ 'ದ' ಕಾರಾದೇಶ |
| (b) ಕಡುವೆಳ್ಪು | (ii) | 'ಮ' ಕಾರಕ್ಕೆ 'ವ' ಕಾರಾದೇಶ |
| (c) ನೀರ್ವೊನಲ್ | (iii) | 'ಹ' ಕಾರಕ್ಕೆ 'ವ' ಕಾರಾದೇಶ |
| (d) ಮೈದೊಳೆ | (iv) | 'ಬ' ಕಾರಕ್ಕೆ 'ವ' ಕಾರಾದೇಶ |
| | (v) | 'ಪ' ಕಾರಕ್ಕೆ 'ವ' ಕಾರಾದೇಶ |

(1) a - iv, b - iii, c - ii, d - i
(2) a - ii, b - iii, c - v, d - iv
(3) a - iv, b - ii, c - iii, d - i
(4) a - ii, b - iv, c - v, d - i

95. ಮುಂದಿನವುಗಳಲ್ಲಿ ಗುಂಪಿಗೆ ಸೇರದ ಸಂಧಿ ಪದವನ್ನು ಗುರುತಿಸಿ.

ವಾಗ್ದೇವಿ, ಅಜಾದಿ, ಮೇರೆದಪ್ಪು, ಚಿದಾನಂದ

(1) ವಾಗ್ದೇವಿ
(2) ಅಜಾದಿ
(3) ಮೇರೆದಪ್ಪು
(4) ಚಿದಾನಂದ

96. ಈ ಮುಂದಿನ ಕ್ರಿಯಾಸಮಾಸದ ಉದಾಹರಣೆಗಳಲ್ಲಿ ಗುಂಪಿಗೆ ಸೇರದ ಪದವನ್ನು ಗುರುತಿಸಿರಿ.

ತಲೆದೂಗಿದನು, ಮೈದಡವಿ, ಹಿಂಬಾಲಿಸು, ಕಣ್ದೆರೆದನು

(1) ತಲೆದೂಗಿದನು
(2) ಕಣ್ದೆರೆದನು
(3) ಹಿಂಬಾಲಿಸು
(4) ಮೈದಡವಿ

97. ಈ ಗಾದೆಯನ್ನು ಪೂರ್ಣಗೊಳಿಸಿ.

"ತಾಯಿದ್ರೆ ತವರೆಚ್ಚು, ತಂದಿದ್ರೆ ———."

(1) ಸೋದರರೆಚ್ಚು
(2) ಸಿರಿಯೆಚ್ಚು
(3) ಬಳಗೆಚ್ಚು
(4) ಮುದ್ದೆಚ್ಚು

ಕಚ್ಚಾ ಕಾರ್ಯಕ್ಕಾಗಿ ಸ್ಥಳ

ಮೈದೊಳೆ = ಮೈ + ತೊಳೆ



www.shikarat.com

CamScanner

98. ಅಲಂಕಾರಗಳನ್ನು ಅವುಗಳ ನಿದರ್ಶನಗಳೊಂದಿಗೆ ಹೊಂದಿಸಿ ಬರೆಯಿರಿ.

(a) ರೂಪಕಾಲಂಕಾರ
(b) ಉತ್ಪ್ರೇಕ್ಷಾಲಂಕಾರ
(c) ಶ್ಲೇಷಾಲಂಕಾರ
(d) ಅರ್ಥಾಂತರನ್ಯಾಸಲಂಕಾರ

(i) ಸತ್ಯಕ್ಕೆ ಯಾವಾಗಲೂ ಜಯ, ಸತ್ಯ ಮಾರ್ಗದಲ್ಲಿ ನಡೆದ ಪಾಂಡವರಿಗೆ ಜಯ ಲಭಿಸಿತು.
(ii) ಆ ಹುಡುಗಿ ಸೌಂದರ್ಯದಲ್ಲಿ ಅಪ್ಸರೆ.
(iii) ಊಟ ಬಲ್ಲವನಿಗೆ ರೋಗವಿಲ್ಲ, ಮಾತು ಬಲ್ಲವನಿಗೆ ಜಗಳವಿಲ್ಲ.
(iv) ಆ ಉದ್ಯಾನವು ಅಮರಾವತಿಯಂತೆ ಸುಮನಭರಿತವಾಗಿತ್ತು.
(v) ಅವನ ಮನೆ ನಂದಗೋಕುಲ ಎನಿಸುತ್ತದೆ.

(1) a - ii, b - iii, c - i, d - iv
(2) a - ii, b - v, c - iv, d - i
(3) a - iii, b - v, c - i, d - ii
(4) a - iii, b - v, c - i, d - iv

99. 'ಅ' ಪಟ್ಟಿಯಲ್ಲಿನ ಖ್ಯಾತ ಕರ್ಣಾಟಕಗಳಿಗೆ 'ಬ' ಪಟ್ಟಿಯಲ್ಲಿನ ಉದಾಹರಣೆಗಳನ್ನು ಸರಿ ಹೊಂದಿಸಿ ಬರೆಯಿರಿ.

ಅ
(a) ಮಹಾಸ್ರಗ್ಧರಾ ವೃತ್ತ
(b) ಉತ್ಪಲಮಾಲಾ ವೃತ್ತ
(c) ಚಂಪಕಮಾಲಾ ವೃತ್ತ
(d) ಮತ್ತೇಭವಿಕ್ರೀಡಿತ ವೃತ್ತ

ಬ
(i) ಕುರುವಂಶಾಧೀಶನಂ ಮೊದಲಿಸಿ ದಿನದಟಂ ಭೀಮನುದ್ದಾಮ ಭೀಮಂ
(ii) ಇದು ಲಾಕ್ಷಾಗೇಹದಾಹಕ್ಕಿದು ವಿಷಮ ವಿಷಾನ್ನಕ್ಕಿದಾ ನಾಡ ಜೂದಿಂ
(iii) ಪಸಿವಿಂದಂ ಬಹುಬಾಧೆಯಿಂ ರುಜೆಗಳಿಂ ಕೇಡಾಗುವೀ ಮಯ್ಗೆಸಂ
(iv) ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ಬನವಾಸಿ ದೇಶದೊಳ್
(v) ಕಡೆದೊಡೆ ಪಾಲ್ಗಡಲ್ ವಿವಿಧ ವಸ್ತುವನೀಯದೆ ತೇಯೆ ಚಂದನಂ

(1) a - iii, b - v, c - i, d - ii
(2) a - ii, b - i, c - iv, d - v
(3) a - ii, b - iv, c - v, d - iii
(4) a - iv, b - iii, c - ii, d - i

100. 'ಅ' ಪಟ್ಟಿಯನ್ನು 'ಬ' ಪಟ್ಟಿಯೊಂದಿಗೆ ಹೊಂದಿಸಿ ಬರೆಯಿರಿ.

ಅ
(a) ಜಗಣ
(b) ರಗಣ
(c) ಸಗಣ
(d) ತಗಣ

ಬ
(i) — ∪ —
(ii) ∪ ∪ —
(iii) ∪ — ∪
(iv) ∪ — —
(v) — — ∪

(1) a - iii, b - ii, c - i, d - iv
(2) a - ii, b - v, c - iii, d - iv
(3) a - ii, b - iv, c - i, d - v
(4) a - iii, b - i, c - ii, d - v

---

ಕಚ್ಚಾ ಕಾರ್ಯಕ್ಕಾಗಿ ಸ್ಥಳ



www.shikarat.com
CamScanner